ಸಂಪಾದಕರು :
ಎಂ.ಎಸ್. ವಿಕಾಸ್

ಸೋಮವಾರ, ಜನವರಿ 29, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 257 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 2023

janathavani@mac.com
www.janathavani.com
08192 254736 91642 99999

## ಮೋದಿ ಮತ್ತೆ ಪ್ರಧಾನಿಯಾಗಲಿ

### ಕಾಂಗ್ರೆಸ್ ಸೇರಿದ್ದಕ್ಕೆ ಪಾಪ ಪ್ರಜ್ಞೆ ಇಲ್ಲ: ಶೆಟ್ಟರ್



ದಾವಣಗೆರೆ, ಜ. 28 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉತ್ತಮ ಸರ್ಕಾರ ನೀಡಿದ್ದಾರೆ, ದೇಶದ ಉನ್ನತಿಗೆ ಶ್ರಮಿಸಿದ್ದಾರೆ. ಅವರು ಮೂರನೇ ಬಾರಿ ಪ್ರಧಾನ ಮಂತ್ರಿಯಾಗಬೇಕು ಎಂದು ಇತ್ತೀಚೆಗೆ ಬಿಜೆಪಿಗೆ ಮರಳಿದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಹೇಳಿದ್ದಾರೆ.

ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಮತ್ತೆ ಬಿಜೆಪಿಗೆ ಸೇರಬೇಕೆಂದು ಕಳೆದ ಐದಾರು ತಿಂಗಳಲ್ಲಿ ಕಾರ್ಯಕರ್ತರಿಂದ ಒತ್ತಡವಿತ್ತು. ಕೇಂದ್ರ ನಾಯಕರೂ ಈ ಬಗ್ಗೆ ಹೇಳಿ ಕಳಿಸಿದ್ದರು. ಹೀಗಾಗಿ ಮತ್ತೆ ಬಿಜೆಪಿಗೆ ಸೇರಿದೆ. ಈ ಹಿಂದೆ ಕಾಂಗ್ರೆಸ್ ಸೇರಿದ ಬಗ್ಗೆ ಪಾಪಪ್ರಜ್ಞೆಯಾಗಲೀ, ಪಶ್ಚಾತ್ತಾಪವಾಗಲೀ ಇಲ್ಲ ಎಂದರು.

ನಾನು ದಶಕಗಳಿಂದ ಬಿಜೆಪಿ - ಜನಸಂಘದಲ್ಲಿ ಇದ್ದೆ. ಬಿಜೆಪಿಯು ನಾನೇ ಕಟ್ಟಿ ಬೆಳೆಸಿದ ಮನೆ ಎಂದೂ ಅವರು ಹೇಳಿದರು.

ರಾಜ್ಯದಲ್ಲಿ ಪಕ್ಷವನ್ನು ಮತ್ತಷ್ಟು ಬಲಪಡಿಸಿ ಶಕ್ತಿ ನೀಡಬೇಕಿದೆ. ರಾಜ್ಯದ ಎಲ್ಲಾ ಲೋಕಸಭಾ ಸೀಟುಗಳಲ್ಲಿ ಬಿಜೆಪಿ ಗೆಲ್ಲುವಂತಾಗಬೇಕು ಎಂದೂ ಅವರು ತಿಳಿಸಿದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ನಾನು ಬೇಷರತ್ತಾಗಿ ಪಕ್ಷಕ್ಕೆ (4ನೇ ಪುಟಕ್ಕೆ)

**ಎಸ್ಸೆಸ್ ಬೆಂಬಲ ಛಲೋ ಆಯ್ತು**

**ಶಿವಮೊಗ್ಗದ ಬಿಜೆಪಿ ಸಂಸದ ಬಿ.ವೈ. ರಾಘವೇಂದ್ರ ಅವರು ಮತ್ತೆ ಚುನಾವಣೆಯಲ್ಲಿ ಗೆಲ್ಲಲಿ ಎಂದು ಕಾಂಗ್ರೆಸ್ ಹಿರಿಯ ಶಾಸಕ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಹೇಳಿರುವುದು 'ಛಲೋ ಆಯ್ತು' ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಹೇಳಿದರು. ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಶೆಟ್ಟರ್, ಶಿವಶಂಕರಪ್ಪ ಅವರಿಗೂ ಬಿಜೆಪಿಯವರು ಗೆಲ್ಲಬೇಕೆಂಬ ಅಪೇಕ್ಷೆ ಇದೆ ಎನಿಸುತ್ತದೆ. ಇದು ಛಲೋ ಆಯ್ತು ಎಂದು ಹೇಳಿದರು.**

# ಕಾಂತರಾಜ್ ವರದಿ ಸ್ವೀಕರಿಸುತ್ತೇವೆ

## ಚಿತ್ರದುರ್ಗದ ಬೃಹತ್ ಶೋಷಿತರ ಜಾಗೃತಿ ಸಮಾವೇಶದಲ್ಲಿ ಸಿದ್ದರಾಮಯ್ಯ

ಚಿತ್ರದುರ್ಗ, ಜ. 28 - ನ್ಯಾಯಮೂರ್ತಿ ಕಾಂತರಾಜು ಅವರ ಹಿಂದುಳಿದ ವರ್ಗಗಳ ಆಯೋಗ ನೀಡಿರುವ ಜಾತಿ ಗಣತಿ ವರದಿಯನ್ನು ನಮ್ಮ ಸರ್ಕಾರ ಸ್ವೀಕಾರ ಮಾಡಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟ ಮತ್ತು ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟಗಳ ಸಂಯುಕ್ತಾಶ್ರಯದಲ್ಲಿ ಚಿತ್ರದುರ್ಗದಲ್ಲಿ ಆಯೋಜಿಸಿದ್ದ 'ಶೋಷಿತ ಸಮುದಾಯಗಳ ಜಾಗೃತಿ ಸಮಾವೇಶವನ್ನು' ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿಯಾಗಿದ್ದಾಗ ಜಾತಿ ಗಣತಿ ವರದಿ ಮಾಡಿಸಿದ್ದೆ. ನನ್ನ ಬಳಿಕ ಮುಖ್ಯಮಂತ್ರಿಗಳಾದ ಹೆಚ್.ಡಿ ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಯಾರೂ ಕೂಡ ಜಾತಿ ಗಣತಿ ವರದಿಯನ್ನು ಸ್ವೀಕರಿಸಲಿಲ್ಲ ಎಂದರು.

ಕಾಂತರಾಜ್ ಅವರ ವರದಿಯನ್ನು ಕೆಲವರು ಓದದೇ, ತಿಳಿಯದೇ ವಿರೋಧಿಸುತ್ತಿದ್ದಾರೆ. ಜಾತಿ ಗಣತಿಯ ವರದಿ ಅವೈಜ್ಞಾನಿಕ ಎಂದು ಹೇಳಿಕೆ ನೀಡುತ್ತಿದ್ದಾರೆ. ಜಾತಿ ಗಣತಿಯನ್ನು ನಾವು ಸ್ವೀಕರಿಸುತ್ತೇವೆ. ಏನಾದರೂ ಭಿನ್ನಾಭಿಪ್ರಾಯಗಳಿದ್ದರೆ ತಜ್ಞರ ಸಲಹೆ ಪಡೆದು ಅದನ್ನು ಸರಿಪಡಿಸಿ ಕೊಳ್ಳಲಾಗುವುದು ಎಂದು ಸಿದ್ದರಾಮಯ್ಯ ಹೇಳಿದರು.

ಹಿಂದುಳಿದ, ದಲಿತ ಮತ್ತು ಶೋಷಿತ ಜಾತಿ ಸಮುದಾಯಗಳ ಜನ ತಮ್ಮ ಶತ್ರು ಯಾರು ಎನ್ನುವುದನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಬೇಕು. ಶತ್ರುಗಳನ್ನು ಸ್ಪಷ್ಟವಾಗಿ ಗುರುತಿಸಬೇಕು. ಅವರನ್ನು ಸಂಪೂರ್ಣವಾಗಿ ತಿರಸ್ಕರಿಸಿ ನಿಮ್ಮ ಸ್ವಾಭಿಮಾನ ಬೆಳೆಸಿಕೊಳ್ಳಿ ಎಂದು ಹೇಳಿದರು.

ಮಂಡಲ್ ವರದಿಯನ್ನು ಬಿಜೆಪಿ ಮತ್ತು ಆರೆಸ್ಸೆಸ್ ವಿರೋಧಿಸುತ್ತಲೇ ಬಂದಿವೆ. ಸಾಮಾಜಿಕ ನ್ಯಾಯ ಮತ್ತು ಸಮಾನ ಅವಕಾಶಗಳನ್ನು ಬಿಜೆಪಿ, ಆರೆಸ್ಸೆಸ್ ನಿರಂತರವಾಗಿ ವಿರೋಧಿಸುತ್ತಲೇ ಇವೆ. ಆದ್ದರಿಂದ ಸಂವಿಧಾನ ಮೀಸಲಾತಿ ಹಾಗೂ ಸಾಮಾಜಿಕ ನ್ಯಾಯದ ವಿರೋಧಿಗಳ ಕೈಗೆ ಅಧಿಕಾರ ಹೋಗಬಾರದು ಎಂದು ಅಂಬೇಡ್ಕರ್ ಎಚ್ಚರಿಸಿದ್ದರು. ಈ ಎಚ್ಚರಿಕೆಯನ್ನು ನಾವು ಮರೆಯ ಬಾರದು ಎಂದರು.

ಕೇಂದ್ರದಲ್ಲಿ ನಮ್ಮ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಇಡೀ ದೇಶದಲ್ಲಿ ಜಾತಿ (4ನೇ ಪುಟಕ್ಕೆ)



### 'ಅವಳನ್ನು' ಪಾರ್ಲಿಮೆಂಟ್ ಉದ್ಘಾಟನೆಗೆ ಕರೆಯಲಿಲ್ಲ

**ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ನೂತನ ಸಂಸತ್ ಭವನದ ಉದ್ಘಾಟನೆಗೆ ಆಹ್ವಾನಿಸಲಿಲ್ಲ ಎಂದು ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.**

**ರಾಷ್ಟ್ರಪತಿ ಬಗ್ಗೆ ಏಕವಚನ ಬಳಸಿದ ಮುಖ್ಯಮಂತ್ರಿ**

**ದ್ರೌಪದಿ ಮುರ್ಮು ಅವರು ಶೋಷಿತ ಸಮುದಾಯಕ್ಕೆ ಸೇರಿದವರು. 'ಅವಳನ್ನು ಪಾರ್ಲಿಮೆಂಟ್ ಉದ್ಘಾಟನೆಗೆ ಕರೆಯಲಿಲ್ಲ'. ಅವರು ಸಂವಿಧಾನದ ಸಂರಕ್ಷಕರಾಗಿದ್ದರೂ ಕರೆಯಲಿಲ್ಲ. ಮೊನ್ನೆ ಅಯೋಧ್ಯೆಯಲ್ಲಿ ಶ್ರೀರಾಮಚಂದ್ರನ ದೇವಸ್ಥಾನ ಉದ್ಘಾಟನೆಗೂ ಕರೆಯಲಿಲ್ಲ ಎಂದರು. ಈ ಹೇಳಿಕೆ ನೀಡುವ ವೇಳೆ ರಾಷ್ಟ್ರಪತಿ ಮುರ್ಮು ಅವರ ಬಗ್ಗೆ ಸಿದ್ದರಾಮಯ್ಯ ಏಕವಚನ ಬಳಸಿದರು.**

**ನಾನು ಹಿಂದೂ ವಿರೋಧಿ ಎಂದು ಹೇಳುತ್ತಿದ್ದಾರೆ. ಆದರೆ, ನಾನು ಯಾರ ವಿರೋಧಿಯೂ ಅಲ್ಲ. ಎಲ್ಲ ಮನುಷ್ಯತ್ವದ ಪರವಾಗಿರುವವನು, ಮನುಷ್ಯ ಧರ್ಮದ ಪರವಾಗಿರುವವನು ಎಂದು ಸಿಎಂ ತಿಳಿಸಿದರು.**

### ಸಂಪತ್ತಿನ ಸಮಾನ ಹಂಚಿಕೆಯಾಗಲಿ

**ಸಮಾಜದಲ್ಲಿ ಮೇಲ್ವರ್ಗ ಹಾಗೂ ಕೆಳವರ್ಗದ ಅಂತರ ಇದೆ. ಇದೆಲ್ಲ ಹೋಗಿ ಸಮಾನತೆ ಬರಬೇಕಿದೆ. ಈ ದೇಶದ ಸಂಪತ್ತು ಹಾಗೂ ಅಧಿಕಾರ ಸಮಾನವಾಗಿ ಹಂಚಿಕೆಯಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.**

**ಬಿಜೆಪಿಯ ಮಾತೃ ಸಂಸ್ಥೆಯಾದ ಆರ್.ಎಸ್.ಎಸ್. ಅಸಮಾನತೆಯನ್ನು ಬೆಂಬಲಿಸುತ್ತಿದೆ. ಮಂಡಲ್ ಆಯೋಗದ ವರದಿ ಜಾರಿಯಾಗುವುದನ್ನು ಬಿಜೆಪಿ ವಿರೋಧಿಸಿತ್ತು ಎಂದು ಸಿದ್ದರಾಮಯ್ಯ ನೆನಪಿಸಿದರು.**

**ವಿ.ಪಿ. ಸಿಂಗ್ ಅವರು ಪ್ರಧಾನ ಮಂತ್ರಿಯಾಗಿದ್ದಾಗ ಮಂಡಲ್ ವರದಿ ಸ್ವೀಕಾರ ಮಾಡಿದ್ದರು. ನಂತರ ಪ್ರಧಾನಿ ಯಾದ ನರಸಿಂಹರಾವ್ ಈ ವರದಿ ಜಾರಿಗೆ ತಂದರು ಎಂದು ಹೇಳಿದರು. ಆರೆಸ್ಸೆಸ್, ಬಿಜೆಪಿಯವರು ಮೊದಲಿನಿಂದಲೂ ಮೀಸಲಾತಿ ಹಾಗೂ ಸಾಮಾಜಿಕ ನ್ಯಾಯ ವಿರೋಧಿಸುತ್ತಿದ್ದಾರೆ ಎಂದು ಟೀಕಿಸಿದರು.**

### ಕುರಿ ಕಾಯೋನ ಮಗ ಎಂದು ವಿರೋಧ

**ಕುರಿ ಕಾಯುವವನ ಮಗ ಮುಖ್ಯಮಂತ್ರಿ ಆಗಿಬಿಟ್ಟೆ ಎನ್ನುವ ಕಾರಣಕ್ಕೆ ಪಟ್ಟಭದ್ರರು ನನ್ನನ್ನು ವಿರೋಧಿಸುತ್ತಾರೆ ಎಂದು ಸಿದ್ದರಾಮಯ್ಯ ಆರೋಪಿಸಿದರು.**

**ಸಿದ್ದರಾಮಯ್ಯ 14 ಬಜೆಟ್ ಮಂಡಿಸಿದರು ಎಂಬ ಕಾರಣಕ್ಕಾಗಿ ನನ್ನ ವಿರೋಧ ಮಾಡುತ್ತಾರೆ. ನಾನು ಏನು ತಪ್ಪು ಮಾಡಿದ್ದೇನೆ? ಎಲ್ಲ ಜಾತಿಯ ಬಡವರಿಗೆ ನ್ಯಾಯ ಕೊಡಿಸುವ ನಿರ್ಣಯ ಮಾಡಿದ್ದು ತಪ್ಪಾ? ಅನ್ನ ಭಾಗ್ಯ, ಕ್ಷೀರ ಭಾಗ್ಯ, ಕೃಷಿ ಭಾಗ್ಯ, ಷೂ ಭಾಗ್ಯ, ಶಾದಿ ಭಾಗ್ಯ, ಇಂದಿರಾ ಕ್ಯಾಂಟೀನ್ ಎಲ್ಲ ಕಾರ್ಯಕ್ರಮ ಮಾಡಿದ್ದು ಸಿದ್ದರಾಮಯ್ಯ ಅಲ್ಲವಾ? ಐದು ಗ್ಯಾರಂಟಿಗಳನ್ನು ಅಧಿಕಾರಕ್ಕೆ** (4ನೇ ಪುಟಕ್ಕೆ)

## ಸಿದ್ದರಾಮಯ್ಯ ವಜಾಗೆ ಕುಮಾರಸ್ವಾಮಿ ಆಗ್ರಹ

**ರಾಷ್ಟ್ರಪತಿಗೆ ಏಕವಚನ ಬಳಕೆ ಹಿನ್ನೆಲೆ**

ಬೆಂಗಳೂರು, ಜ. 28 - ದೇಶದ ಪ್ರಥಮ ಪ್ರಜೆ ಆಗಿರುವ ದ್ರೌಪದಿ ಮುರ್ಮು ಅವರನ್ನು ಏಕವಚನದಲ್ಲಿ ಸಂಬೋಧಿಸಿದ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೂಡಲೇ ವಜಾ ಮಾಡಬೇಕು ಎಂದು ರಾಷ್ಟ್ರಪತಿ ಕುರಿತು ಸಿದ್ದರಾಮಯ್ಯ ಆಡಿದ ಮಾತುಗಳಿಗೆ ಆಕ್ಷೇಪಿಸಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ. ಚಿತ್ರದುರ್ಗದಲ್ಲಿ ನಡೆದ ಸಮಾವೇಶದಲ್ಲಿ ಸಿದ್ದರಾಮಯ್ಯ ಅವರು ರಾಷ್ಟ್ರಪತಿ ಕುರಿತು ಏಕವಚನದಲ್ಲಿ ಮಾತನಾಡಿರುವುದಕ್ಕೆ ಕುಮಾರಸ್ವಾಮಿ ಆಕ್ಷೇಪಿಸಿದ್ದಾರೆ.

ಶೋಷಿತ ಬುಡಕಟ್ಟು ಸಮುದಾಯ ದಿಂದ ಬಂದ ದೇಶದ ಮೊತ್ತ ಮೊದಲ ರಾಷ್ಟ್ರಪತಿ ಮುರ್ಮು. ಅದರಲ್ಲೂ ಅವರು ಮಹಿಳೆ. ಶೋಷಿತರ ಜಾಗೃತಿ ಸಮಾವೇಶದಲ್ಲೇ ಅವರಿಗೆ (4ನೇ ಪುಟಕ್ಕೆ)

## ಸೌಹಾರ್ದತೆಗಾಗಿ ನಿತೀಶ್ ಹಿಂದಿಯನ್ನೂ ಸಹಿಸಿಕೊಂಡಿದ್ದೆವು

**ಡಿಎಂಕೆ ನಾಯಕ ಟಿ.ಆರ್. ಬಾಲು**

ಚೆನ್ನೈ, ಜ. 28 - ಜೆಡಿಯು ರಾಷ್ಟ್ರೀಯ ಅಧ್ಯಕ್ಷ ಹಾಗೂ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಪ್ರತಿಯೊಬ್ಬರೂ ಹಿಂದಿ ಮಾತನಾಡಬೇಕು ಎಂದು ಪಟ್ಟು ಹಿಡಿಯುತ್ತಿದ್ದರು. ಐ.ಎನ್.ಡಿ.ಐ.ಎ. ಒಕ್ಕೂಟದ ಸೌಹಾರ್ದತೆಗಾಗಿ ಅದನ್ನೂ ಸಹಿಸಿಕೊಂಡಿದ್ದೆವು ಎಂದು ಡಿ.ಎಂ.ಕೆ. ನಾಯಕ ಟಿ.ಆರ್. ಬಾಲು ಹೇಳಿದ್ದಾರೆ.

ಕಾಂಗ್ರೆಸ್ ನಾಯಕರ ಜೊತೆ ಸೀಟು ಹಂಚಿಕೆ ಮಾತುಕತೆಯ ನಂತರ ಮಾತನಾಡಿದ ಬಾಲು, ಆರಂಭದಿಂದಲೂ ಐ.ಎನ್.ಡಿ.ಐ.ಎ. ಒಕ್ಕೂಟದ ಬಗ್ಗೆ ಅವರಿಗೆ ಕೆಲ ಸಮಸ್ಯೆಗಳಿದ್ದವು ಎನ್ನಿಸುತ್ತಿತ್ತು. ನಿತೀಶ್ ನಿರ್ಗಮನದಿಂದ ಯಾವುದೇ ನಷ್ಟವಿಲ್ಲ ಎಂದರು.

ಐ.ಎನ್.ಡಿ.ಐ.ಎ. ಮೈತ್ರಿಕೂಟದಲ್ಲಿ ಯಾವುದೂ ಯೋಜಿತವಾಗಿ ನಡೆದಿಲ್ಲ ಎಂದು ನಿತೀಶ್ ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಬಾಲು, ಅವರ ಯೋಜನೆ ಏನು? ಅವರು ಯಾವುದೇ ಯೋಜನೆ ಹೇಳಲಿಲ್ಲ. ಮೈತ್ರಿಕೂಟದ ಸಭೆಯಲ್ಲಿ ಹಿಂದಿಯನ್ನಷ್ಟೇ (6ನೇ ಪುಟಕ್ಕೆ)

## ಬಿಹಾರ ಸಿಎಂ ಆಗಿ ನಿತೀಶ್ ಪ್ರಮಾಣ ವಚನ

### 18 ತಿಂಗಳ ಹಿಂದಷ್ಟೇ ಬಿಜೆಪಿ ಸಂಗ ತೊರೆದಿದ್ದ ಜೆಡಿಯು ಅಧ್ಯಕ್ಷ



ಪಾಟ್ನಾ, ಜ. 28 - ಜೆಡಿಯು ಅಧ್ಯಕ್ಷ ನಿತೀಶ್ ಕುಮಾರ್ ಅವರು ಬಿಹಾರದ ಮುಖ್ಯಮಂತ್ರಿಯಾಗಿ ದಾಖಲೆಯ ಒಂಭತ್ತನೇ ಬಾರಿಗೆ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಮಹಾಘಟಬಂಧನ ಮೈತ್ರಿಕೂಟವನ್ನು ತೊರೆದು, ಬಿಜೆಪಿ ಜೊತೆ ಕೈ ಜೋಡಿಸಿದ ಕಾರಣ, ಮೊದಲು ರಾಜೀನಾಮೆ ನೀಡಿ ನಂತರ ಮತ್ತೊಮ್ಮೆ ಪ್ರಮಾಣ ವಚನ ಸ್ವೀಕರಿಸಿದ್ದಾರೆ. 18 ತಿಂಗಳ ಹಿಂದಷ್ಟೇ ಅವರು ಬಿಜೆಪಿ ಸಂಗ ತೊರೆದಿದ್ದರು. ಈಗ ಪಲ್ಟಿ ಹೊಡೆದು ಅದೇ ಪಕ್ಷದ ಜೊತೆ ಕೈ ಜೋಡಿಸಿದ್ದಾರೆ.

ಬಿಹಾರದ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು ರಾಜಭವನದಲ್ಲಿ ಪ್ರಮಾಣ ವಚನ ಬೋಧಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ನಾಯಕರಾದ ಸಾಮ್ರಾಟ್ ಚೌಧರಿ ಹಾಗೂ ಮಾಜಿ ಸ್ಪೀಕರ್ ವಿಜಯ್ ಕುಮಾರ್ ಸಿನ್ಹಾ ಅವರು ಉಪ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇದಕ್ಕೂ ಮುಂಚೆ ಚೌಧರಿ ಹಾಗೂ ಸಿನ್ಹಾ ಅವರನ್ನು ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಹಾಗೂ ಉಪ ನಾಯಕರಾಗಿ ಆಯ್ಕೆ ಮಾಡಲಾಗಿತ್ತು.

ಜೆಡಿಯು ಸದಸ್ಯರಾದ ವಿಜಯ್ ಕುಮಾರ್ ಚೌಧರಿ, ವಿಜೇಂದ್ರ ಯಾದವ್ ಹಾಗೂ ಶ್ರವಣ್ ಕುಮಾರ್ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇವರ ಜೊತೆ ಹಿಂದೂಸ್ತಾನ್ ಅವಾಮಿ ಮೋರ್ಚಾದ ಸಂತೋಷ್ ಕುಮಾರ್ ಸುಮನ್ ಹಾಗೂ ಸ್ವತಂತ್ರ ಶಾಸಕ ಸುಮಿತ್ ಸಿಂಗ್ ಅವರೂ ಸಚಿವರಾಗಿದ್ದಾರೆ. ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಆರ್.ಜೆ.ಡಿ.ಯ ಯಾವ ನಾಯಕನೂ ಪಾಲ್ಗೊಂಡಿರಲಿಲ್ಲ.

ಈ ಬೆಳವಣಿಗೆ ಬಗ್ಗೆ ಹೇಳಿಕೆ ನೀಡಿರುವ ಆರ್.ಜೆ.ಡಿ. ನಾಯಕ ತೇಜಸ್ವಿ ಯಾದವ್, ಆಟ ಈಗಷ್ಟೇ ಆರಂಭವಾಗಿದೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಜೆಡಿಯು ನಾಶವಾಗಲಿದೆ ಎಂದರು. ತೇಜಸ್ವಿ ಯಾದವ್ ಅವರು ಹಿಂದಿನ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದರು.

243 ಸದಸ್ಯರ ವಿಧಾನಸಭೆಯಲ್ಲಿ ಜೆಡಿಯು 44 ಶಾಸಕರನ್ನು ಹೊಂದಿದೆ. ಬಿಜೆಪಿಯ 78 ಶಾಸಕರಿದ್ದಾರೆ. ನಿತೀಶ್ ಕುಮಾರ್‌ಗೆ ಒಬ್ಬ ಸ್ವತಂತ್ರ ಶಾಸಕನ ಬೆಂಬಲವೂ ಇದೆ. ಜಿತನ್ ರಾಮ್ ಮಾಂಝಿ ನೇತೃತ್ವದ ಹಿಂದೂಸ್ತಾನಿ ಅವಾಮಿ ಮೋರ್ಚಾ ಬೆಂಬಲ ನೀಡುತ್ತಿದ್ದು, ನಾಲ್ಕು ಶಾಸಕರನ್ನು ಹೊಂದಿದೆ. ಆರ್‌ಜೆಡಿ 79, ಕಾಂಗ್ರೆಸ್ 19 ಹಾಗೂ ಎಡಪಕ್ಷಗಳು 16 ಶಾಸಕರನ್ನು ಹೊಂದಿವೆ.

## ಪೊಲೀಸ್ ಕಾನ್‌ಸ್ಟೇಬಲ್ ಹುದ್ದೆಗೆ ಪರೀಕ್ಷೆ

### 40 ಕೇಂದ್ರಗಳಲ್ಲಿ ನಡೆದ ಪರೀಕ್ಷೆ, 5311 ಅಭ್ಯರ್ಥಿಗಳು ಗೈರು




ದಾವಣಗೆರೆ, ಜ. 28- ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್‌ಸ್ಟೇಬಲ್ (ಸಿಎಆರ್/ಡಿಎಆರ್) ಹುದ್ದೆಗಳಿಗೆ ಲಿಖಿತ ಪರೀಕ್ಷೆ ಭಾನುವಾರ ನಗರದ 40 ಕೇಂದ್ರಗಳಲ್ಲಿ ನಡೆಯಿತು.

ನೋಂದಾಯಿಸಿಕೊಂಡಿದ್ದ 15,000 ಅಭ್ಯರ್ಥಿಗಳ ಪೈಕಿ 9,689 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 5,311 ಅಭ್ಯರ್ಥಿಗಳು ಗೈರು ಹಾಜರಾಗಿದ್ದಾರೆ. ಪೊಲೀಸ್ ಅಧೀಕ್ಷಕರಾದ ಉಮಾ ಪ್ರಶಾಂತ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಜಯಕುಮಾರ್ ಎಂ. ಸಂತೋಷ್, ಮಂಜುನಾಥ್ ಅವರುಗಳೂ ಸಹ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

## ಮಂಡ್ಯದಲ್ಲಿ ಹನುಮ ಧ್ವಜ ವಿವಾದ

### ಪೊಲೀಸರ ಲಾಠಿ ಪ್ರಹಾರದ ನಂತರ ಧ್ವಜ ತೆರವು



ಮಂಡ್ಯ, ಜ. 28 – ಇಲ್ಲಿನ ಕೆರಗೋಡು ಗ್ರಾಮದಲ್ಲಿ 108 ಅಡಿ ಎತ್ತರದ ಧ್ವಜ ಸ್ತಂಭದಲ್ಲಿ ಹನುಮ ಧ್ವಜ ಹಾರಿಸಿದ್ದು ವಿವಾದಕ್ಕೆ ಕಾರಣವಾಗಿದೆ. ನಿಯಮ ಮೀರಿ ಧ್ವಜ ಹಾರಿಸಲಾಗಿದೆ ಎಂದಿರುವ ಪೊಲೀಸರು, ಧ್ವಜ ಇಳಿಸಿದ್ದಾರೆ.

ಬಿಜೆಪಿ, ಜೆಡಿಎಸ್ ಹಾಗೂ ಭಜರಂಗ ದಳದ ಕಾರ್ಯಕರ್ತರು ಧ್ವಜ ಇಳಿಸುವುದನ್ನು ವಿರೋಧಿಸಿದರು. ಜನರನ್ನು ಚೆದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು. ಹನುಮಧ್ವಜ ಇಳಿಸಿದ ನಂತರ, ಪೊಲೀಸರು ಹಾಗೂ ಅಧಿಕಾರಿಗಳು ಅಲ್ಲಿ ರಾಷ್ಟ್ರಧ್ವಜ ಹಾರಿಸಿದ್ದಾರೆ.

ಕೆರಗೋಡು ಹಾಗೂ ನೆರೆಯ 12 ಗ್ರಾಮಸ್ಥರು ಸೇರಿಕೊಂಡು ಧ್ವಜಸ್ತಂಭವನ್ನು ಅಳವಡಿಸಿದ್ದರು. ಇದರಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಕಾರ್ಯಕರ್ತರು ಪ್ರಮುಖವಾಗಿ ಭಾಗಿಯಾಗಿದ್ದರು ಎನ್ನಲಾಗಿದೆ.

ಅವರು ಹನುಮಧ್ವಜ ಹಾರಿಸಿದ್ದರು. ಇದಕ್ಕೆ ಕೆಲವರು ವಿರೋಧಿಸಿ ದೂರು ದಾಖಲಿಸಿದ್ದರು. ನಂತರ ಧ್ವಜ ಇಳಿಸಲು ಗ್ರಾಮ ಪಂಚಾಯ್ತಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು.

ಧ್ವಜ ಇಳಿಸುವುದಕ್ಕೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಶನಿವಾರ ರಾತ್ರಿಯಿಡೀ ಜನರು ಧ್ವಜ ಇಳಿಸುವುದನ್ನು ವಿರೋಧಿಸಿ ಪ್ರತಿಭಟನೆ ನಡೆಸಿದ್ದರು.

ಭಾನುವಾರ ಮಧ್ಯಾಹ್ನದ ನಂತರ ಪೊಲೀಸರು ಬಲವಂತವಾಗಿ ಪ್ರತಿಭಟನಾಕಾರರನ್ನು ತೆರವುಗೊಳಿಸಿ ಧ್ವಜ ಇಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆರಗೋಡು ಗ್ರಾಮದ ಗೌರಿಶಂಕರ ಸೇವಾ ಟ್ರಸ್ಟ್ ನವರು ಕರ್ನಾಟಕ ಧ್ವಜ ಹಾಗೂ ತ್ರಿವರ್ಣ ಧ್ವಜ ಹಾರಿಸುವ ಉದ್ದೇಶಕ್ಕಾಗಿ ಮಾತ್ರ ಬಳಸುವುದಾಗಿ ಧ್ವಜಸ್ತಂಭ ನಿರ್ಮಾಣಕ್ಕೆ ಅನುಮತಿ ಪಡೆದಿದ್ದರು. ಈಗ ಅಲ್ಲಿ ಹಾರಿಸಲಾಗಿದ್ದ ರಾಷ್ಟ್ರಧ್ವಜ ಇಳಿಸಿ ಹನುಮಧ್ವಜ ಹಾರಿಸಿದ್ದಾರೆ ಎಂದು ಹೇಳಿದರು. (4ನೇ ಪುಟಕ್ಕೆ)

## ದೇವಾಲಯದ ಪುರಾತನ ಫಿರಂಗಿಗೆ ಮರು ಜೀವ

ವಡೋದರ, ಜ. 28 – ದೀಪಾವಳಿಯ ಮೆರವಣಿಗೆ ವೇಳೆ ಹಳೆಯ ಹಿತ್ತಾಳೆಯ ಫಿರಂಗಿ ಸಿಡಿಸುವ ಇಲ್ಲಿನ ದೇವಾಲಯದ ಸಂಪ್ರದಾಯಕ್ಕೆ ಮರು ಜೀವ ನೀಡಲಾಗುತ್ತಿದೆ. ಗುಜರಾತ್‌ನ ವಡೋದರಾದ ರಂಚೋಡ್ಜಿ ದೇವರ ವಾರ್ಷಿಕ ಮೆರವಣಿಗೆ ಸಂದರ್ಭದಲ್ಲಿ ಫಿರಂಗಿ ಸಿಡಿಸಲಾಗುತ್ತಿತ್ತು. 1996ರಲ್ಲಿ ಅವಘಡ ನಡೆದು ಕೆಲವರು ಗಾಯಗೊಂಡ ನಂತರ ಪದ್ಧತಿಯನ್ನು ನಿಲ್ಲಿಸಲಾಗಿತ್ತು.

ಫಿರಂಗಿ ಬಳಕೆಗೆ ಅನುಮತಿ ನೀಡಬೇಕೆಂದು ದೇವಾಲಯದ ಅರ್ಚಕರು ನ್ಯಾಯಾಲಯದ ಮೊರೆ ಹೋಗಿದ್ದರು. ಅಧಿಕಾರಿಗಳು ವಿಧಿ ವಿಜ್ಞಾನ ಪರಿಣಿತರು, ಪೊಲೀಸರು ಹಾಗೂ ಹಿರಿಯ ವಕೀಲರ ಸಮಕ್ಷಮದಲ್ಲಿ ಫಿರಂಗಿ ಪರೀಕ್ಷೆ ನಡೆಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಮೂರ್ತಿ ಎ.ಆರ್. ಪಟೇಲ್ ನಿರ್ದೇಶನ ನೀಡಿದ್ದರು.

ಅದರಂತೆ ಫಿರಂಗಿಯನ್ನು ವಡೋದರಾದ ನವಲಖಿ ಮೈದಾನದ ಮಧ್ಯದಲ್ಲಿರಿಸಿ ಸಿಡಿಸಲಾಗಿತ್ತು. ದೇವಾಲಯದ ಅರ್ಚಕ ಜನಾರ್ದನ ದಾವೆ ಅವರು ಊದಿನ ಕಡ್ಡಿ ಬಳಸಿ ಫಿರಂಗಿ ಸಿಡಿಸಿದ್ದರು. ಬರೋಡಾದ ಗಾಯಕ್ವಾಡ್ ರಾಜವಂಶಸ್ಥರು ಈ ಫಿರಂಗಿ ಪದ್ಧತಿಯನ್ನು ಆರಂಭಿಸಿದ್ದರು ಎಂದು ಹೇಳಲಾಗುತ್ತಿದೆ. ಫಿರಂಗಿ ಪ್ರಯೋಗ ನಡೆಸಿದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಈ ಪದ್ಧತಿ ಮುಂದುವರೆಸುವ ಬಗ್ಗೆ ನ್ಯಾಯಾಲಯ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ.

**ಒಂಭತ್ತನೇ ವರ್ಷದ ಪುಣ್ಯಸ್ಮರಣೆ**



ಜೀವನದಲ್ಲಿ ಶ್ರೇಷ್ಠವಾದ ಶಿಸ್ತು ಮತ್ತು ಸಂಸ್ಕಾರಯುತ ಬದುಕನ್ನು ನಡೆಸಿ, ಪ್ರೀತಿ ವಾತ್ಸಲ್ಯದ ಪ್ರತಿರೂಪವಾಗಿ ಎಲ್ಲರಿಗೂ ಪ್ರೀತಿಯ ಚಿಲುಮೆಯಾಗಿ, ಸದಾಕಾಲ ಎಲ್ಲರ ಒಳಿತನ್ನು ಬಯಸಿದ ನಿಮ್ಮ ಅಗಲುವಿಕೆ ನಮಗೆ ಅತೀವ ದುಃಖವನ್ನುಂಟು ಮಾಡಿದೆ. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಪ್ರಾರ್ಥಿಸುವ,

ಲಿಂ|| ಹೆಚ್.ಡಿ. ಶೇಖರಪ್ಪನವರು
ನಿವೃತ್ತ ಮುಖ್ಯೋಪಾಧ್ಯಾಯರು, ಅತ್ತಿಗೆರೆ
ಜನನ : 03-09-1945 ನಿಧನ : 28.01.2015

ಇಂತಿ ದುಃಖತಪ್ತರು :
ಪತ್ನಿ: ಶ್ರೀಮತಿ ಸುನಂದಮ್ಮ
ಹಾಗೂ ಕುಟುಂಬ ವರ್ಗದವರು

# ವಾಸ್ತು ಹೆಸರಿನಲ್ಲಿ ಹೆದರಿಸುವ ವ್ಯಕ್ತಿಗಳ ಬಗ್ಗೆ ಜಾಗೃತರಾಗಬೇಕು



## ಜಿಗಳಿಯಲ್ಲಿ ಹುಲಿಕಲ್ ನಟರಾಜ್ ಮನವಿ

ಮಲೇಬೆನ್ನೂರು, ಜ.28- ವಾಸ್ತು ಹೆಸರಿನಲ್ಲಿ ಜನರನ್ನು ಹೆದರಿಸುವ ಜ್ಯೋತಿಷಿಗಳು ಮತ್ತು ವಾಸ್ತು ಸಲಹೆಗಾರರ ಬಗ್ಗೆ ಜನರು ಜಾಗೃತರಾಗಬೇಕೆಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಸಂಸ್ಥಾಪಕ ರಾಜ್ಯಾಧ್ಯಕ್ಷ ಹುಲಿಕಲ್ ನಟರಾಜ್ ಹೇಳಿದರು.

ಅವರು, ಶನಿವಾರ ಸಂಜೆ ಜಿಗಳಿಯ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಪವಾಡ ಗುಟ್ಟು ಬಯಲು ಕಾರ್ಯಕ್ರಮದಲ್ಲಿ ಮಾತನಾಡಿದರು.

1980 ಕ್ಕಿಂತ ಆಚೆಗೆ ಜನರಿಗೆ ವಾಸ್ತು ಬಗ್ಗೆ ಗೊತ್ತಿರಲಿಲ್ಲ. ನಂತರ ಹುಟ್ಟಿದ ವಾಸ್ತು ಸಲಹೆಗಾರರು ಜನರನ್ನು ಹೆದರಿಸಿ ಕಟ್ಟಿದ ಮನೆಗಳನ್ನು ಕೆಡವಿಸುವ ಕೆಲಸ ಆರಂಭಿಸಿ, ಜನರ ನೆಮ್ಮದಿಯನ್ನು ಹಾಳು ಮಾಡುತ್ತಾ ಬಂದಿದ್ದಾರೆ.

ವಾಸ್ತು ಹೆಸರಿನಲ್ಲಿ 6 ಸಾವಿರ ಕೋಟಿ ಹಣ ಸಂಪಾದಿಸಿದ್ದ ಒಬ್ಬ ವ್ಯಕ್ತಿ 2 ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ಕೊಲೆಯಾದರು. ತನ್ನ ಸಾವಿನ ಬಗ್ಗೆ ಗೊತ್ತಿಲ್ಲದವನು ಜನರಿಗೆ ಹೇಗೆ ವಾಸ್ತು ಹೇಳುತ್ತಾನೆಂದು ಪ್ರಶ್ನಿಸಿದ ಹುಲಿಕಲ್ ನಟರಾಜ್ ಅವರು, ಮಂತ್ರವಾದಿಗಳು ಆಂತರಿಕ ಭಯೋತ್ಪಾದಕರಾಗಿದ್ದಾರೆ. ಜ್ಯೋತಿಷಿಗಳನ್ನು ಯಾವುದೇ ಕಾರಣಕ್ಕೂ ನಂಬಬೇಡಿ ಎಂದು ಜನರನ್ನು ಎಚ್ಚರಿಸಿದರು.

ವಾಸ್ತುವಿಗಿಂತ ನಿಮ್ಮ ಮನಸ್ಸಿನ ವಾಸ್ತು ಮುಖ್ಯ. ಪಂಚಾಂಗಕ್ಕಿಂತ ಪಂಚ ಅಂಗಗಳು ಮುಖ್ಯವಾಗಿದ್ದು, ನಮಗೆ ಏಕ ಸಂಸ್ಕೃತಿಗಿಂತ ಬಹು ಸಂಸ್ಕೃತಿ ಬಹಳ ಮುಖ್ಯ ಎಂದ ನಟರಾಜ್ ಅವರು, ಇದುವರೆಗೂ ಒಟ್ಟು 15 ಸಾವಿರ ಇಂತಹ ಕಾರ್ಯಕ್ರಮಗಳನ್ನು ಮಾಡಿ, ಜನರನ್ನು ಮೌಢ್ಯದಿಂದ ಹೊರತರುವ ಪ್ರಯತ್ನ ಮಾಡುತ್ತಿದ್ದೇನೆಂದರು.

ಮಕ್ಕಳನ್ನು ಬಹಳ ದುಡ್ಡು ಕೊಟ್ಟು ಕಾನ್ವೆಂಟ್‌ಗೆ ಸೇರಿಸಿದರೆ ಸಾಲದು. ಅವರಿಗೆ ಕಷ್ಟ-ಸುಖ, ಸಂಬಂಧ, ಮಾನವೀಯತೆಯನ್ನು ಕಲಿಸಬೇಕು. ಇಲ್ಲದಿದ್ದರೆ ಅವರು ಬೆಳೆದು ಉದ್ಯೋಗಕ್ಕೆ ಸೇರಿದ ನಂತರ ನಿಮ್ಮನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಾರೆಂದು ಹುಲಿಕಲ್ ನಟರಾಜ್ ಪೋಷಕರಿಗೆ ಕಿವಿಮಾತು ಹೇಳಿದರು.

ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಡಾ. ಎ.ಬಿ.ರಾಮಚಂದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, ಮೌಢ್ಯ ಮುಕ್ತ ಸಮಾಜ ನಿರ್ಮಾಣಕ್ಕಾಗಿ ನಾವು-ನೀವೆಲ್ಲರೂ ಹುಲಿಕಲ್ ನಟರಾಜ್ ಅವರೊಂದಿಗೆ ಕೈ ಜೋಡಿಸೋಣ ಎಂದರು.

ಕಾರ್ಯಕ್ರಮದ ರೂವಾರಿ ಹಾಗೂ ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿ.ಆನಂದಪ್ಪ ಅಧ್ಯಕ್ಷತೆ ವಹಿಸಿದ್ದರು.

ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಹಾಸನ ಜಿಲ್ಲಾಧ್ಯಕ್ಷ ಮಹಾಂತಪ್ಪ, ಜಿ.ಪಂ. ಮಾಜಿ ಅಧ್ಯಕ್ಷ ಡಾ. ವೈ.ರಾಮಪ್ಪ, ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ನಂದಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ.ವೀರಯ್ಯ, ಗ್ರಾಮದ ಮುಖಂಡ ಗೌಡ್ರ ಬಸವರಾಜಪ್ಪ, ಗ್ರಾ.ಪಂ. ಮಾಜಿ ಅಧ್ಯಕ್ಷ ಡಿ.ಹೆಚ್. ಮಂಜುನಾಥ್, ಉಪಾಧ್ಯಕ್ಷ ವೈ.ಚೇತನ್‌ಕುಮಾರ್, ಗ್ರಾ.ಪಂ. ಸದಸ್ಯರಾದ ಕೆ.ಜಿ.ಬಸವರಾಜ್, ಡಿ. ಎಂ.ಹರೀಶ್, ಗ್ರಾಮದ ಕೆ.ಷಣ್ಮುಖಪ್ಪ, ಎಕ್ಕೆಗೊಂದಿ ರುದ್ರಗೌಡ, ಬಿ.ಸೋಮಶೇಖರಚಾರಿ, ಮಲೇಬೆನ್ನೂರಿನ ತಳಸದ ಬಸವರಾಜ್, ಪಿ.ಹೆಚ್. ಶಿವಕುಮಾರ್, ಎನ್.ಕೆ.ರಾಜೀವ್, ಕುಂಬಳೂರು ವಾಸು, ಶರಣ್, ಎಸ್‌ಡಿಎಂಸಿ ಅಧ್ಯಕ್ಷ ಬಿ.ಪ್ರಭಾಕರ್, ಸದಸ್ಯರಾದ ಜಿ.ಆರ್.ಚಂದ್ರಪ್ಪ, ವಿಜಯಭಾಸ್ಕರ್, ಗಂಗಾಧರಚಾರಿ, ಸುನೀತಾ ನಾಗರಾಜ್, ರೇಣುಕಾ ನಿಂಗಪ್ಪ, ಗ್ರಾಮದ ಕೆ.ಎಸ್.ನಂದ್ಯಪ್ಪ, ಬೆಣ್ಣೇರ್ ನಂದ್ಯಪ್ಪ, ಮುದ್ದಪ್ಪ ಶಿವಶಂಕರ್, ಜಿ.ಪಿ. ಮಂಜುನಾಥ್ ಸೇರಿದಂತೆ ರಾಜ್ಯ ವೈಜ್ಞಾನಿಕ ಪರಿಷತ್ತಿನ 36 ಜಿಲ್ಲಾಧ್ಯಕ್ಷರು ಭಾಗವಹಿಸಿದ್ದರು.

ಪತ್ರಕರ್ತ ಪ್ರಕಾಶ್ ಸ್ವಾಗತಿಸಿದರು. ಕಲಾವಿದ ಡಿ.ರಂಗನಾಥ್ ನಿರೂಪಿಸಿದರು. ಶಾಲಾ ಮುಖ್ಯ ಶಿಕ್ಷಕ ನಾಗೇಶ್ ವಂದಿಸಿದರು.

# ನಗರದಲ್ಲಿ ಕರಸೇವಕರಿಗೆ ಆತ್ಮೀಯ ಸನ್ಮಾನ



ದಾವಣಗೆರೆ, ಜ. 25- ಅಯೋಧ್ಯೆ ರಾಮ ಮಂದಿರ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಸಿದ್ದವೀರಪ್ಪ ಬಡಾವಣೆ, ಎಂಸಿಸಿ ಬಿ ಬ್ಲಾಕ್, ಆಂಜನೇಯ ಬಡಾವಣೆ ನಾಗರಿಕರು 1990ರ ದಶಕದಲ್ಲಿ ಕರಸೇವಕರು, ಹಿರಿಯರೂ ಆದ ಕೆ.ಬಿ. ಶಂಕರ್ ನಾರಾಯಣ ಹಾಗೂ ಬುಕ್ ಸ್ಟಾಲ್ ಸೋಮಣ್ಣ ಅವರನ್ನು ಪೂಜಾ ಕಾರ್ಯಕ್ರಮಕ್ಕೆ ಆಹ್ವಾನಿಸಿ, ಸನ್ಮಾನಿಸುವುದರೊಂದಿಗೆ ವಿಶೇಷವಾಗಿ ಸಂಭ್ರಮಿಸಲಾಯಿತು. ಈ ಸಂದರ್ಭದಲ್ಲಿ ಡಾ. ಶಿವಕುಮಾರ್ ಸ್ವಾಮಿ ಭಕ್ತ ಮಂಡಳಿ ಸರ್ವ ಸದಸ್ಯರು, ಆಂಜನೇಯ ಬಡಾವಣೆ, ಎಂಸಿಸಿ ಬಿ ಬ್ಲಾಕ್, ಸಿದ್ದವೀರಪ್ಪ ಬಡಾವಣೆಯ ನಾಗರಿಕರು ಉಪಸ್ಥಿತರಿದ್ದರು.

# ಕಂಚಿಕೆರೆ ಬಿದ್ದ ಹನುಮಪ್ಪನಮಟ್ಟಿಯಲ್ಲಿ ರಾಮನಿಗೆ ಕ್ಷೀರಾಭಿಷೇಕ



ದಾವಣಗೆರೆ, ಜ.25- ಕಂಚೀಕೆರೆ ಗ್ರಾಮದ ಶ್ರೀಕ್ಷೇತ್ರ ಬಿದ್ದ ಹನುಮಪ್ಪನಮಟ್ಟಿ ಶ್ರೀ ವೀರಾಂಜನೇಯ ದೇವಸ್ಥಾನದಲ್ಲಿ ಶ್ರೀ ಬಸವರಾಜ ಗುರೂಜಿಯವರಿಂದ ಕಂಚಿಕೆರೆ ಗ್ರಾಮದ ಗುರು-ಹಿರಿಯರೊಂದಿಗೆ ಶ್ರೀರಾಮನ ಧ್ವಜಾರೋಹಣ ನೆರವೇರಿತು.

ನಂತರ ಶ್ರೀರಾಮನಿಗೆ ಕ್ಷೀರಾಭಿಷೇಕ, ಹೂವಿನ ಅಲಂಕಾರ, ಅಯೋಧ್ಯೆಯ ಶ್ರೀರಾಮನ ಚಿತ್ರಗಳಿಗೆ, ತೆಂಗಿನ ಗರಿಗಳಿಂದ ಸಿಂಗರಿಸಿ ಪೂಜೆ ಸಲ್ಲಿಸಲಾಯಿತು ಮತ್ತು ಕಂಚೀಕೆರೆಯ ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿ ಸಂಘದವರಿಂದ ಶ್ರೀರಾಮನ ಭಜನೆಯು ಪೂಜ್ಯ ಶ್ರೀ ಬಸವರಾಜ ಗುರೂಜಿಯವರ ಕುರಿತು ಭಜನೆ ಮಾಡಲಾಯಿತು.

ಈ ಸಮಯದಲ್ಲಿ ಕಂಚಿಕೆರೆ ಗ್ರಾಮದ ಭಜರಂಗದಳದವರು ಬೈಕ್ ರ್‍ಯಾಲಿ ನಡೆಸಿದರು.

ಕಾರ್ಯಕ್ರಮದಲ್ಲಿ ಮಹಾದೇವಮ್ಮ ಮಲ್ಲಿಕಾರ್ಜುನಪ್ಪ, ಸಂಗಪ್ಪ ತೋಟದ, ಪ್ರಕಾಶ್ ಬಿನ್ ಮಹಾದೇವಪ್ಪ, ಶ್ರೀ ದುರ್ಗಾಂಬಿಕಾ ಭಜನಾ ಮಂಡಳಿ ಕಂಚೀಕೆರೆ, ರಾಜ ಮಲ್ಲಿಕಾರ್ಜುನಪ್ಪ, ಮಹೇಶಪ್ಪ ಗಂಗನಕಟ್ಟೆ, ಬಿ. ಸಂತೋಷ್‌ಕುಮಾರ್, ಎಂ. ವಿ. ಮಂಜುನಾಥ್, ಎಂ. ಬಿ. ನಾಗರಾಜ್, ಬಿ. ಗೀತಾ, ಎಂ. ಉದಯಕುಮಾರ್, ಸುಧಾ, ಧರಣೇಂದ್ರ, ತರಕಾರಿ ಕೊಟ್ರೇಶಪ್ಪ , ಷಣ್ಮುಖಪ್ಪ ಗೌಡ್ರು, ಎಸ್. ಎಂ. ಪ್ರಕಾಶ್, ಟಿ. ಎಸ್. ಪ್ರಭಾಕರ್, ಗೌಡ್ರು ರಾಘವೇಂದ್ರ, ವೀರಣ್ಣ ಉಪನ್ಯಾಸಕರು, ಸಂತೋಷ್ ಹಾಲುವರ್ತಿ ಹಾಗೂ ಕಂಚಿಕೆರೆ ಗ್ರಾಮದ ಸುತ್ತಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

# ಬಾಲ ರಾಮನ ಗುಣಗಳು ವಿದ್ಯಾರ್ಥಿಗಳಿಗೂ ಆದರ್ಶ



## ಲಯನ್ಸ್ ಶಾಲಾ ಶ್ರೀರಾಮ ಪೂಜಾ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಎಚ್.ಬಿ.ಮಂಜುನಾಥ

ದಾವಣಗೆರೆ, ಜ.28- ಶ್ರೀರಾಮಚಂದ್ರನ ಆದರ್ಶ ಗುಣ ವಿಶೇಷಗಳು ಬಾಲಕನಾಗಿದ್ದಾಗಲೇ ಪ್ರಕಟವಾಗುತ್ತಿದ್ದವು, ಇವು ಇಂದಿನ ಶಾಲಾ ವಿದ್ಯಾರ್ಥಿಗಳಿಗೂ ಮಾರ್ಗ ದರ್ಶಕವಾಗಿವೆ ಎಂದು ಹಿರಿಯ ಪತ್ರಕರ್ತ ಎಚ್ ಬಿ ಮಂಜುನಾಥ ಹೇಳಿದರು.

ಅವರು ನಗರದ ದೇವರಾಜ ಅರಸು ಬಡಾವಣೆಯ ಲಯನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಏರ್ಪಾಡಾಗಿದ್ದ ಶ್ರೀರಾಮ ಭಕ್ತಿ ಸಮರ್ಪಣಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಶ್ರೀ ರಾಮನು ಬಾಲಕನಾಗಿದ್ದಾಗಲೇ ವಿಶ್ವಾಮಿತ್ರರು ರಾಮನಿಗೆ ಸಕಲಶಸ್ತ್ರಾಸ್ತ್ರಾದಿ ವಿದ್ಯೆಗಳನ್ನು ಕಲಿಸಿಕೊಟ್ಟ ನಿದರ್ಶನಗಳು ರಾಮಾಯಣದಲ್ಲಿ ಬರುತ್ತದೆಯಾದರೂ ಅವರು ಲಕ್ಷ್ಮಣನಿಗೂ ಕಲಿಸಿಕೊಟ್ಟದ್ದು ಎಲ್ಲೂ ಕಂಡುಬರುವುದಿಲ್ಲ. ಆದರೆ, ಲಕ್ಷ್ಮಣನೂ ರಾಮನಂತೆ ಸಕಲ ಶಸ್ತ್ರಾಸ್ತ್ರಗಳ ಪರಿಣತನಾಗಿದ್ದು, ಹೇಗೆಂದರೆ ರಾಮ ತಾನು ಕಲಿತು ಸಿದ್ಧಿಸಿಕೊಂಡಿದ್ದನ್ನು ತಮ್ಮ ಲಕ್ಷ್ಮಣನಿಗೆ ಹೇಳಿಕೊಟ್ಟ ಎಂಬುದು ಗೊತ್ತಾಗುತ್ತದೆ.

ಇಂದಿನ ವಿದ್ಯಾರ್ಥಿಗಳು ಸಹಾ ತಾವು ಕೇಳಿ ಅರ್ಥ ಮಾಡಿಕೊಂಡ ಪಾಠಗಳನ್ನು ಅರ್ಥ ಮಾಡಿಕೊಳ್ಳದ ಸಹಪಾಠಿಗಳಿಗೆ ಮನದಟ್ಟಾಗುವಂತೆ ಹೇಳಬೇಕು ಎಂಬುವ ಆದರ್ಶ ಸಂದೇಶಗಳು ಇದರಿಂದ ನಮಗೆ ತಿಳಿಯುತ್ತದೆ ಎಂದರಲ್ಲದೇ, ನಾರಾಯಣನ ಅವತಾರಿಯಾದ ಶ್ರೀ ರಾಮನು ಸ್ವತಃ ಶಿವಲಿಂಗ ಸ್ಥಾಪನೆ ಮಾಡಿ ಪೂಜಿಸಿದರೆ ಶಿವನು ರಾಮನ ಧ್ಯಾನ ಮಾಡುವಂತೆ ಪಾರ್ವತಿಗೆ ಹೇಳಿದ ಎಂಬುದು ತಿಳಿಯುತ್ತದೆ. ಹೀಗಿರುವಾಗ ಹರಿಹರರಲ್ಲಿ ಭೇದವಿಲ್ಲ ಎಂಬುದನ್ನು ನಾವು ತಿಳಿಯಬೇಕು ಎಂದರು.

ತ್ರೇತಾ ಯುಗದ ಅಯೋಧ್ಯೆಯ ವೈಭವ, ನಂತರದಲ್ಲಿ ವಿದೇಶಿ ಆಕ್ರಮಣಕಾರಿಗಳ ದಾಳಿ ಹಾಗೂ ಅವರು ಮಾಡಿದ ವಿನಾಶ, ಈಗಿನ ಅಯೋಧ್ಯೆಯ ಪುನರ್ ನಿರ್ಮಾಣ ಇವುಗಳ ಸವಿವರ ನುಡಿ ಚಿತ್ರಣವನ್ನು ಮಂಜುನಾಥ್ ಮಕ್ಕಳಿಗೂ ಅರ್ಥವಾಗುವಂತೆ ವಿವರಿಸಿದರು.

ಲಯನ್ಸ್ ಕ್ಲಬ್ ಶಾಲೆ ಹಾಗೂ ಟ್ರಸ್ಟಿನ ಪ್ರಮುಖರುಗಳಾದ ಡಾ. ಬಿಎಸ್ ನಾಗಪ್ರಕಾಶ್, ಆರ್.ಜಿ.ಶ್ರೀನಿವಾಸ್ ಮೂರ್ತಿ, ಬೆಳ್ಳೂಡಿ ಶಿವಕುಮಾರ್, ಬಂಡಿವಾಡ್ ವೈ.ಬಿ.ಸತೀಶ್, ಭೀಮಾನಂದ, ಮುಖ್ಯೋಪಾಧ್ಯಾಯರಾದ ಶಾಂತವೀರಪ್ಪ ರೇಖಾ ಮುಂತಾಗಿ, ಅಧ್ಯಾಪಕ ವರ್ಗದವರು ಭಾಗವಹಿಸಿದ್ದರು.

# ನಗರದಲ್ಲಿ ಇಂದು ಸಂವಿಧಾನ ಜಾಗೃತಿ, ಜೋಗೇಂದ್ರಸಿಂಗ್ ಮಂಡಲ್ ಜನ್ಮದಿನ ಕಾರ್ಯಕ್ರಮ

ದಾವಣಗೆರೆ, ಜ.28- ಪ್ರಜಾ ಪರಿವರ್ತನಾ ವೇದಿಕೆ ಜಿಲ್ಲಾ ಘಟಕದಿಂದ ಸಂವಿಧಾನ ಜಾಗೃತಿ ಹಾಗೂ ಜೋಗೇಂದ್ರ ಸಿಂಗ್ ಮಂಡಲ್ ಜನ್ಮ ದಿನ ಕಾರ್ಯಕ್ರಮವನ್ನು ನಾಳೆ ದಿನಾಂಕ 29ರಂದು ಬೆಳಿಗ್ಗೆ 11.30ಕ್ಕೆ ನಗರದ ರೋಟರಿ ಬಾಲಭವನದಲ್ಲಿ ಏರ್ಪಡಿಸಲಾಗಿದೆ ಎಂದು ವೇದಿಕೆಯ ರಾಜ್ಯ ಕಾರ್ಯಾಧ್ಯಕ್ಷ ಎ.ಡಿ. ಈಶ್ವರಪ್ಪ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಶ್ರೀ ಉರಿಲಿಂಗಿ ಪೆದ್ದಮಠದ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಪ್ರಜಾ ಪರಿವರ್ತನಾ ವೇದಿಕೆ ರಾಜ್ಯಾಧ್ಯಕ್ಷ ಬಿ. ಗೋಪಾಲ್ ಕಾರ್ಯಕ್ರಮ ಉದ್ಘಾಟಿಸುವರು. ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಸಂವಿಧಾನ ಪೀಠಿಕೆ ಅನಾವರಣಗೊಳಿಸಲಿದ್ದಾರೆ ಎಂದರು.

ವೇದಿಕೆಯ ಜಿಲ್ಲಾಧ್ಯಕ್ಷ ಎಚ್.ಕೆ. ಕೃಷ್ಣ ಅರಕೆರೆ ಅಧ್ಯಕ್ಷತೆ ವಹಿಸಲಿದ್ದಾರೆ. ವೇದಿಕೆಯ ರಾಜ್ಯ ಉಪಾಧ್ಯಕ್ಷ ಡಾ. ಸೈಯ್ಯದ್ ರೋಷನ್ ಮುಲ್ಲಾ ಉಪನ್ಯಾಸ ನೀಡುವರು. ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎನ್. ರುದ್ರಮುನಿ, ಪ್ರಜಾಪರಿವರ್ತನಾ ವೇದಿಕೆ ಉಪಾಧ್ಯಕ್ಷೆ ಕಾಂಚನಾ ಎನ್., ಶಿಕ್ಷಕ ಎ.ಕೆ. ಚನ್ನೇಶ್ವರ, ಕೆ.ಓ. ಮಂಜಪ್ಪ, ಬಾಬಾಸಾಹೇಬ್ ಅಂಬೇಡ್ಕರ್ ಜನಸೇವಾ ಸಮಿತಿ ಉಪಾಧ್ಯಕ್ಷ ಭೀಮಪ್ಪ ಪಿ. ಭಾಗವಹಿಸುವರು. ಕಾರ್ಯಕ್ರಮ ನಿಮಿತ್ತ ಬೈಕ್ ರ್‍ಯಾಲಿ ನಡೆಸಲಾಗುವುದು ಎಂದು ತಿಳಿಸಿದರು.

ಪ್ರಜಾಪರಿವರ್ತನಾ ವೇದಿಕೆಯ ಪ್ರಮುಖರಾದ ಎಚ್.ಕೆ. ಕೃಷ್ಣ ಅರಕೆರೆ, ಮನೋಹರ, ಧನ್ಯಕುಮಾರ್, ಹನುಮಂತಪ್ಪ, ತಿಪ್ಪೇಸ್ವಾಮಿ, ಅಜಯ್ ಎಂ. ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಪ್ರತಿಮೆ ಅನಾವರಣ : ಮಂಜಪ್ಪ ಹೆಸರು ಕೈಬಿಟ್ಟಿರುವುದಕ್ಕೆ ಆಕ್ರೋಶ



ಹೊನ್ನಾಳಿ, ಜ.28- ಪಟ್ಟಣದ ದೇವನಾಯಕನಹಳ್ಳಿಯ ಕನಕದಾಸ ವೃತ್ತದಲ್ಲಿ ಪ್ರತಿಷ್ಠಾಪಿಸಿರುವ ಕನಕದಾಸರ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಚ್.ಬಿ. ಮಂಜಪ್ಪ ಅವರ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಕೈಬಿಟ್ಟಿರುವುದು ಅತ್ಯಂತ ಖಂಡನೀಯ ಎಂದು ಹೊನ್ನಾಳಿ ಮತ್ತು ನ್ಯಾಮತಿ ಅವಳಿ ತಾಲ್ಲೂಕುಗಳ ಕುರುಬ ಸಂಘದ ಕಾರ್ಯಾಧ್ಯಕ್ಷ ಧರ್ಮಪ್ಪ ಹಾಗೂ ಅಧ್ಯಕ್ಷ ನೆಲಹೊನ್ನೆ ಮೋಹನ್ ಹೇಳಿದರು.

ಶನಿವಾರ ಪಟ್ಟಣದಲ್ಲಿ ಕರೆಯಲಾಗಿದ್ದ ಸಂಘದ ಸಭೆಯಲ್ಲಿ ಅವರು ಮಾತನಾಡಿದರು.

ಫೆ.3 ರಂದು ಹೊನ್ನಾಳಿಯಲ್ಲಿ ಕನಕದಾಸರ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರವನ್ನು ಕುರುಬ ಸಮಾಜದ ಮತ್ತೊಂದು ಸಂಘಟನೆಯಾದ ಹೊನ್ನಾಳಿ ತಾಲ್ಲೂಕು ಕುರುಬ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಹ್ವಾನಿಸಿರುವುದು ಸಂತೋಷದ ವಿಷಯ.

ಆದರೆ ಈ ಸಮಾರಂಭದ ಆಹ್ವಾನ ಪತ್ರಿಕೆಯಲ್ಲಿ ಕುರುಬ ಸಮಾಜದ ಪ್ರಭಾವಿ ಮುಖಂಡರೂ ಹಾಗೂ ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷರೂ ಆದ ಎಚ್.ಬಿ. ಮಂಜಪ್ಪ ಅವರ ಹೆಸರನ್ನು ಕೈಬಿಟ್ಟಿರುವುದು ಸರಿಯಲ್ಲ, ಅವರ ಹೆಸರನ್ನು ಏಕೆ ಕೈಬಿಡಲಾಗಿದೆ ಎಂದು ಸಂಬಂಧಪಟ್ಟವರು ಉತ್ತರಿಸಬೇಕು ಎಂದು ಹೇಳಿದರು.

ಫೆಬ್ರವರಿ 2 ನೇ ತಾರಿಖಿನೊಳಗೆ ಎಚ್.ಬಿ. ಮಂಜಪ್ಪ ಅವರ ಹೆಸರನ್ನು ಕೈ ಬಿಟ್ಟಿರುವುದಕ್ಕೆ ಸೂಕ್ತ ಕಾರಣ ನೀಡಬೇಕು. ಇಲ್ಲದಿದ್ದರೆ, ನಮ್ಮ ಅವಳಿ ತಾಲ್ಲೂಕು ಕುರುಬ ಸಂಘದ ವತಿಯಿಂದ ನಾವೇ ಕನಕದಾಸರ ಪ್ರತಿಮೆಯನ್ನು ಅನಾವರಣಗೊಳಿಸಿ ಮಾಲಾರ್ಪಣೆ ಮಾಡುತ್ತೇವೆ ಎಂದು ಎಚ್ಚರಿಕೆ ನೀಡಿದರು.

ಸಂಘದ ಗೌರವಾಧ್ಯಕ್ಷ ಆರುಂಡಿ ಪ್ರಕಾಶ್ ಮಾತನಾಡಿ, ಎಚ್.ಬಿ.ಮಂಜಪ್ಪ ಜಿಲ್ಲಾ ಮಟ್ಟದಲ್ಲಿ ಹಾಗೂ ರಾಜಕೀಯವಾಗಿ ಪಕ್ಷದಲ್ಲಿ ಪ್ರಭಾವಿ ವ್ಯಕ್ತಿಯಾಗಿ ಬೆಳೆಯುತ್ತಿದ್ದಾರೆ. ಇದನ್ನು ಸಹಿಸದ ನಮ್ಮವರೇ ಕೆಲವರು ಎಚ್.ಬಿ. ಮಂಜಪ್ಪ ಅವರನ್ನು ತುಳಿಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಸಂಘದ ಉಪಾಧ್ಯಕ್ಷ ಎಚ್. ನರಸಪ್ಪ, ಎಚ್.ಡಿ. ವಿಜೇಂದ್ರಪ್ಪ, ಬೆನಕಪ್ಪ ಹರಳಹಳ್ಳಿ, ಕುಂಬಳೂರು ವಾಗೀಶ್, ಕೆ. ಪುಟ್ಟಪ್ಪ, ಖಜಾಂಚಿ ಎಚ್.ಎ. ನರಸಿಂಹಪ್ಪ, ಪ್ರಧಾನ ಕಾರ್ಯದರ್ಶಿ ಎಂ.ಆರ್. ಮಹೇಶ್, ಮುಕ್ತೇನಹಳ್ಳಿ ಕನಕದಾಸ ಮತ್ತಿತರರು ಉಪಸ್ಥಿತರಿದ್ದರು.

# ಕರುಣಾ ಟ್ರಸ್ಟ್‌ನಲ್ಲಿ ಸೈಕಲ್ ವಿತರಣೆ



ದಾವಣಗೆರೆ, ಜ.28- ಕರುಣಾ ಜೀವ ಕಲ್ಯಾಣ ಟ್ರಸ್ಟ್ ನಲ್ಲಿ ಬಡತನ ನಿರ್ಮೂಲನೆಗಾಗಿ 100 ಸೈಕಲ್ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಟ್ರಸ್ಟಿನ ದಾನಿಗಳಾದ ಪ್ರೊ. ಪಾಳೇಗಾರ್ ನಿರ್ಮಲ ಡಾ. ಕರಿಬಸಪ್ಪ 100 ಸೈಕಲ್ ವಿತರಿಸುವುದರ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಫಲಾನುಭವಿಗಳಾದ ತಿಪ್ಪೇಸ್ವಾಮಿ ಮತ್ತು ಸುಮಾ ಸೈಕಲ್ ಉಪಯೋಗಗಳ ಬಗ್ಗೆ ಅನಿಸಿಕೆ ಹಂಚಿಕೊಂಡರು.

ನಮ್ಮ ರಾಜ್ಯದಲ್ಲಿ 25 ವರ್ಷದೊಳಗಿನವರಿಗೆ ಸೈಕಲ್ ಬಳಕೆ ಕಡ್ಡಾಯವಾಗಬೇಕು ಎಂದು ರೈತ ಮುಖಂಡ ತೇಜಸ್ವಿ ಪಟೇಲ್ ಅಭಿಪ್ರಾಯ ವ್ಯಕ್ತ ಪಡಿಸಿದರು. ಸೈಕಲ್‌ಗಳನ್ನು ಉತ್ತಮವಾಗಿ ಬಳಸಿ, ಪರಿಸರ ಜಾಗೃತಿ ಮೂಡಿಸಿ ಎಂದು ಫಲಾನುಭವಿಗಳನ್ನು ಉದ್ದೇಶಿಸಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಮಂಜುಳಾ ಬಸವಲಿಂಗಪ್ಪ, ಬಸವರಾಜ್ ಒಡೆಯರ್, ಎಂ. ಬಸವರಾಜ್, ಮಧುಸೂದನ್, ಮಲ್ಲಾಬಾದಿ ಬಸವರಾಜ್ , ಜಯ್ಯಣ್ಣ, ಮುಂತಾದವರಿದ್ದರು.

# ಖಾಸಗಿ ಬಸ್ ಏಜೆಂಟರ ಸಂಘದ ಸಭೆಯಲ್ಲಿ ಸಂಘದ ಪದಾಧಿಕಾರಿಗಳ ಅವಿರೋಧ ಆಯ್ಕೆ

ದಾವಣಗೆರೆ, ಜ. 28- ಈಚೆಗೆ ನಡೆದ ದಾವಣಗೆರೆ ಖಾಸಗಿ ಬಸ್ ಏಜೆಂಟರ ಸಂಘದ ಸಭೆಯಲ್ಲಿ ಸಂಘದ ಪದಾಧಿಕಾರಿಗಳನ್ನು ಅವಿರೋಧ ಆಯ್ಕೆ ಮಾಡಲಾಯಿತು.

ಸಂಘದ ಅಧ್ಯಕ್ಷರಾಗಿ ಎಸ್. ಉಮೇಶ್, ಉಪಾಧ್ಯಕ್ಷರಾಗಿ ಸತ್ಯನಾರಾಯಣರಾವ್, ಖಜಾಂಚಿಯಾಗಿ ಖಂಡೋಜಿರಾವ್, ಕಾರ್ಯದರ್ಶಿಯಾಗಿ ಮಾರುತಿರಾವ್, ಸಹ ಕಾರ್ಯದರ್ಶಿಯಾಗಿ ಆರ್.ಜಿ. ಕುಮಾರ್ ಹಾಗೂ 19 ಜನ ಸದಸ್ಯರುಗಳು ಆಯ್ಕೆಯಾಗಿದ್ದಾರೆ.

# ಜೈನ್ ಕಾಲೇಜ್ ವಿದ್ಯಾರ್ಥಿಗಳಿಂದ ಇನ್ನೋವೇಟಿವ್ ಪ್ರಾಜೆಕ್ಟ್ ಪ್ರದರ್ಶನ



ದಾವಣಗೆರೆ, ಜ.28- ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿದ್ಯಾರ್ಥಿಗಳು ಯುಕ್ತಿ ಇನ್ನೋವೇಶನ್ ಚಾಲೆಂಜ್‌ನಲ್ಲಿ ಆಯ್ಕೆಯಾದ ಇನ್ನೋವೇಟಿವ್ ಪ್ರಾಜೆಕ್ಟ್‌ಗಳನ್ನು ಐಐಸಿ ರಿಜನಲ್ ಮೀಟ್ 2024 ರಲ್ಲಿ ಪ್ರದರ್ಶಿಸಿದರು.

ಕಳೆದ ದಿನಾಂಕ 10ರಂದು ಈ ಕಾರ್ಯಕ್ರಮವನ್ನು ಹುಬ್ಬಳ್ಳಿ ಕೆಎಲ್‌ಇ ಯುನಿವರ್ಸಿಟಿ ಆಯೋಜಿಸಿತ್ತು. ಕಾರ್ಯಕ್ರಮಕ್ಕೆ ಎಐಸಿಟಿಇ ಸಲಹೆಗಾರರಾದ ಡಾ. ಮಮತಾರಾಣಿ ಅಗರ್‌ವಾಲ್, ಕೇಂದ್ರ ಶಿಕ್ಷಣ ಸಚಿವಾಲಯದ ಅಸಿಸ್ಟೆಂಟ್ ಇನ್ನೋವೇಶನ್ ಡೈರೆಕ್ಟರ್ ದೀಪನ್ ಸಾಹು ಅತಿಥಿಗಳಾಗಿ ಆಗಮಿಸಿದ್ದರು.

ಆಯ್ಕೆಯಾದ ಪ್ರಾಜೆಕ್ಟ್‌ಗಳಾದ ಸ್ಮಾರ್ಟ್ ಮೂವಬಲ್ ರೋಡ್ ಡಿವೈಡರ್, ಸೋಲರ್ ಸಿಸ್ಟಮ್ ಬಳಸಿ ಸೀಡ್ಸ್ ಡ್ರೈಯರ್ ಮತ್ತು ಐಒಟಿ ಬಳಸಿ ಇಂಟಲಿಜೆಂಟ್ ಆಟೋಮೇಷನ್ ಗಳನ್ನು ಸ್ಪರ್ಧೆಯಲ್ಲಿ ಪ್ರದರ್ಶಿಸಲಾಯಿತು. ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಜೈನ್ ಕಾಲೇಜ್ ಪ್ರಾಂಶುಪಾಲ ಡಾ. ಗಣೇಶ್ ಡಿ. ಬಿ, ಸಲಹೆಗಾರ ಡಾ. ಮಂಜಪ್ಪ ಸಾರಥಿ ಹಾಗು ಎಲ್ಲಾ ಬೋಧಕ-ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

# ಸಂತ ಪೌಲರ ಪ.ಪೂ. ಕಾಲೇಜಿನಲ್ಲಿ ಇಂದು ರಕ್ತದಾನ ಶಿಬಿರ

ದಾವಣಗೆರೆ : ಪಿ.ಜೆ. ಬಡಾವಣೆಯಲ್ಲಿರುವ ಸಂತ ಪೌಲರ ಪದವಿ ಪೂರ್ವ ಕಾಲೇಜಿನಲ್ಲಿ ಕಾಲೇಜಿನ ಸಂಸ್ಥಾಪಕಿ ಮದರ್ ತೆರೇಸಾ ಆಫ್ ಲೀಮ ಇವರ ಜನ್ಮದಿನದ ಅಂಗವಾಗಿ ಎಸ್. ಎಸ್. ಕೇರ್ ಟ್ರಸ್ಟ್, ರಕ್ತ ನಿಧಿ ಕೇಂದ್ರ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10 ಗಂಟೆಯಿಂದ ರಕ್ತ ದಾನ ಶಿಬಿರವನ್ನು ಆಯೋಜಿಸಲಾಗಿದೆ.

ದಾನಿಗಳು ರಕ್ತ ದಾನ ಮಾಡಲು ಅವಕಾಶವಿದೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳಿಂದ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ವಿದ್ಯಾರ್ಥಿಗಳ ಜಾಥಾ ಹಮ್ಮಿಕೊಳ್ಳಲಾಗಿದೆ. ಜಾಥಾದಲ್ಲಿ ಸಿಸ್ಟರ್ ಮಾರ್ಜರಿ, ಮುಖ್ಯೋಪಾಧ್ಯಾಯಿನಿ ಸಿಸ್ಟರ್ ವೆನಿಸ್ಸಾ, ಪ್ರಾಂಶುಪಾಲರಾದ ಸಿಸ್ಟರ್ ಸುಮಂತಾ, ಕನ್ನಡ ಮುಖ್ಯೋಪಾಧ್ಯಾಯಿನಿ ಸಿಸ್ಟರ್ ಸುಪ್ರಿಯಾ, ಪ್ರಾಂಶುಪಾಲ ಮೇಘನಾಥ ಕೆ.ಟಿ. ಹಾಜರಿರುವರು.

# ಮಾಯಕೊಂಡ ಕ್ಷೇತ್ರದಲ್ಲಿಂದು ವಿನಯ್ ಕುಮಾರ್ ಕಾಲ್ನಡಿಗೆ

ಕಳೆದ ತಿಂಗಳು 18 ರಿಂದ ಸತತ ತಿಂಗಳಿಂದಲೂ ದಾವಣಗೆರೆ ಲೋಕಸಭಾ ವ್ಯಾಪ್ತಿಯಲ್ಲಿ ಕಾಲ್ನಡಿಗೆ ಜಾಥಾ ಮೂಲಕ ಇನ್ ಸೈಟ್ಸ್ ಐಎಎಸ್ ಸಂಸ್ಥಾಪಕ ಕರ್ನಾಟಕ ಯೂತ್ ಕಾಂಗ್ರೆಸ್ ಔಟ್ರೀಚ್ ಉಪಾಧ್ಯಕ್ಷರಾಗಿ ಆಯ್ಕೆಯಾದ ವಿನಯ್ ಕುಮಾರ್ ಅವರು ಇಂದು ಬೆಳಿಗ್ಗೆ 9.45 ಕ್ಕೆ ಕ್ಷೇತ್ರದ ಅಣಜಿ ಗ್ರಾಮದಿಂದ ಕಾಲ್ನಡಿಗೆ ಜಾಥಾ ಆರಂಭಿಸಲಿದ್ದಾರೆ. ಸ್ಥಳೀಯ ಕಾಂಗ್ರೆಸ್ ಪಕ್ಷದ ಮುಖಂಡರು ಅಣಜಿ ಚಂದ್ರಪ್ಪ, ಮಾಜಿ ತಾ.ಪಂ. ಅಧ್ಯಕ್ಷ ತಿಪ್ಪೇಸ್ವಾಮಿ, ಗ್ರಾ.ಪಂ.ಸದಸ್ಯರಾದ ಸತ್ಯಪ್ಪರ ಪರಸಪ್ಪ, ಉಮಾಶಂಕರ, ಮಾಜಿ ಗ್ರಾ.ಪಂ.ಅಧ್ಯಕ್ಷೆ ಶ್ರೀಮತಿ ರೇಣುಕಾ ಷಣ್ಮುಖ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ. ಕಾಲ್ನಡಿಗೆ ನಂತರ ಹುಲಿಕಟ್ಟೆ, ಗುಡಾಳ್, ಗೊಲ್ಲರಹಟ್ಟಿ, ಕಂದನಕೋವಿ, ಪವಾಡರಂಗನಹಳ್ಳಿ, ಶಿವಪುರ, ಆನಗೋಡು, ಕೊನೆಗೆ ಸಂಜೆ 6 ಗಂಟೆಗೆ ಕೊಗ್ಗನೂರು ಗ್ರಾಮದಲ್ಲಿ ಮುಕ್ತಾಯವಾಗಲಿದೆ.

## ಕುರುಡಿ ಮಠದ ರೇವಣಸಿದ್ಧಯ್ಯ ನಿಧನ



ದಾವಣಗೆರೆ ಸಿಟಿ ಆಂಜನೇಯ ಬಡಾವಣೆ, 16ನೇ ಕ್ರಾಸ್ ವಾಸಿ (ಡೋ. ನಂ. 3992/132) ಕುರುಡಿ ನಿವೃತ್ತ ಶಾಸಕರಾದ ಕುರುಡಿ ಮಠದ ರೇವಣಸಿದ್ದಯ್ಯ (91) ಅವರು ದಿನಾಂಕ 28.01.2024ರಂದು ಭಾನುವಾರ ಬೆಳಿಗ್ಗೆ 9.10ಕ್ಕೆ ನಿಧನರಾದರು. ಮೂವರು ಪುತ್ರರು, ಸೊಸೆಯಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 29.01.2024ರಂದು ಸೋಮವಾರ ಮಧ್ಯಾಹ್ನ 12 ಗಂಟೆಗೆ ಕುರುಡಿ ಗ್ರಾಮದ ಅವರ ತೋಟದಲ್ಲಿ ನೆರವೇರಲಿದೆ.

# ಮಲೇಬೆನ್ನೂರಿನಲ್ಲಿ ಸಂಭ್ರಮದ ಶೋಭಾಯಾತ್ರೆ



ಮಲೇಬೆನ್ನೂರು, ಜ.28- ಪಟ್ಟಣದಲ್ಲಿ ಭಾನುವಾರ ಸಂಜೆ ಗಂಗಾಮತಸ್ಥ ಸಮಾಜದ ವತಿಯಿಂದ ನಿಜಶರಣ ಅಂಬಿಗರ ಚೌಡಯ್ಯ ನವರ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಶೋಭಾಯಾತ್ರೆ ಸಂಭ್ರಮದಿಂದ ಜರುಗಿತು.

ಮೆರವಣಿಗೆಯಲ್ಲಿ ಅಂಬಿಗರ ಚೌಡಯ್ಯ ಮತ್ತು ಡಾ. ಗಂಗೂಬಾಯಿ ಹಾನಗಲ್ ಅವರ ಪ್ರತಿಮೆಗಳು ಗಮನ ಸೆಳೆದವು. ಡಿಜೆ ಸಂಗೀತಕ್ಕೆ ಯುವಕರು ಕುಣಿದು ಸಂಭ್ರಮಿಸಿದರು.

ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಪುರಸಭೆ ಸದಸ್ಯ ಗೌಡ್ರ ಮಂಜಣ್ಣ, ಕಣ್ಣಾಳ್ ಪರಶುರಾಮಪ್ಪ, ಮಾಳಗಿ ಮಂಜಣ್ಣ, ಕಣ್ಣಾಳ್ ಧರ್ಮಣ್ಣ, ಕಣ್ಣಾಳ್ ಹನುಮಂತಪ್ಪ, ಪವನ್ ಕುಮಾರ್, ಕಡೇಮನಿ ಕುಮಾರ್, ಗೌಡ್ರ ರಂಗನಾಥ್ ದೊರೆ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

# ವಿದ್ಯಾನಿಕೇತನ ಶಾಲೆಯಲ್ಲಿ ಇಂದು

ಜಯನಗರ 'ಎ' ಬ್ಲಾಕ್‌ನಲ್ಲಿರುವ ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪಬ್ಲಿಕ್ ಸ್ಕೂಲ್‌ನ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಇಂದು ಸಂಜೆ ವಿದ್ಯಾನಗರ ರಸ್ತೆಯಲ್ಲಿರುವ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸುವರು. ಅಧ್ಯಕ್ಷತೆಯನ್ನು ರುದ್ರಮುನಿ ವಹಿಸುವರು. ಕಾರ್ಯಕ್ರಮವನ್ನು ಹೆಚ್.ಬಿ. ಮಂಜುನಾಥ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಎಲ್.ಎಚ್. ಅರುಣಕುಮಾರ್, ಆರ್. ಮಂಜುನಾಥ ಹೆಗಡೆ, ಕೆ. ಬಿ. ಆನಂದ್ ಆಗಮಿಸುವರು.

# ಕಡಕೋಳ ಶಾಲೆಯಲ್ಲಿ ಗಣರಾಜ್ಯೋತ್ಸವ



ರಾಣೇಬೆನ್ನೂರು, ಜ. 28- ತಾಲ್ಲೂಕಿನ ಅಸುಂಡಿಯ ಡಾ. ಕಡಕೋಳ ಪೋದಾರ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾ ಯಿತು. ಅತಿಥಿಗಳಾಗಿ ಡಾ. ಶಿವಾನಂದ ಪವಾರ್ ಭಾಗವಹಿಸಿ ದ್ದರು. ಶಾಲೆಯ ಅಧ್ಯಕ್ಷ ಪ್ರಶಾಂತ ಕಡಕೋಳ, ನಿರ್ದೇಶಕಿ ರಾಜೇಶ್ವರಿ ಹನಗೋಡಿಮಠ, ವೀರೇಶ ಹನಗೋಡಿಮಠ, ಪ್ರಾಚಾರ್ಯ ರೂಪೇಶ್ ಘಾಟ್ಗೆನವರ ಪಾಲ್ಗೊಂಡಿದ್ದರು.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಸಂವಿಧಾನ ಎಲ್ಲಾ ವರ್ಗದವರಿಗೂ ಸಮಾನತೆ ಕಲ್ಪಿಸಿದೆ

## ಜಗಳೂರು : ಗಣರಾಜ್ಯೋತ್ಸವ ಸಮಾರಂಭದಲ್ಲಿ ಶಾಸಕ.ಬಿ.ದೇವೇಂದ್ರಪ್ಪ

ಜಗಳೂರು, ಜ.28- ಸಂವಿಧಾನ ಕೇವಲ ಶೋಷಿತ ಸಮುದಾಯಗಳ ಮೀಸಲಾತಿಗೆ ಸೀಮಿತವಲ್ಲ. ದೇಶದಲ್ಲಿ ಎಲ್ಲಾ ವರ್ಗದವರಿಗೂ ಆರ್ಥಿಕ, ರಾಜಕೀಯ, ಸಾಮಾಜಿಕ, ಸಮಾನತೆ ಕಲ್ಪಿಸಿದೆ ಎಂದು ಶಾಸಕ ಬಿ.ದೇವೇಂದ್ರಪ್ಪ ಹೇಳಿದರು.

ಪಟ್ಟಣದ ಬಯಲು ರಂಗಮಂದಿರದ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಹಮ್ಮಿಕೊಂಡಿದ್ದ 75 ನೇ ವರ್ಷದ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿವಿಧತೆಯಲ್ಲಿ ಏಕತೆ ಇರುವ ದೇಶ ಭಾರತ. ಸಾರ್ವಭೌಮತ್ವದ ಪ್ರತೀಕವಾಗಿರುವ ಸಂವಿಧಾನಕ್ಕೆ ದಕ್ಕೆ ಉಂಟಾದರೆ ನಾವೆಲ್ಲರೂ ಒಂದಾಗಿ ಹೋರಾಟ ನಡೆಸಬೇಕಿದೆ ಎಂದರು.

ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಸಂಸ್ಕಾರ ಪಡೆದು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು.

ದೇಶದ ರಾಷ್ಟ್ರಲಾಂಛನ, ರಾಷ್ಟ್ರ ಗೀತೆ, ರಾಷ್ಟ್ರ ಧ್ವಜಗಳನ್ನು ಗೌರವಿಸಬೇಕು, ದೇಶಾಭಿಮಾನ ಬೆಳೆಸಿಕೊಳ್ಳಬೇಕು.

ರಾಜ್ಯದಲ್ಲಿ ಬರ ಪರಿಸ್ಥಿತಿ ಇದ್ದರೂ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳು ಬರ ನಿರ್ವಹಣೆಗೆ ಪೂರಕವಾಗಿವೆ. ಜನಪರ



ಕಾಳಜಿಯಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಜೆಗಳ ಹಿತ ಕಾಯುತ್ತಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

**50 ಕೊಟಿ ಅನುದಾನ ಬಿಡುಗಡೆ :** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕ್ಷೇತ್ರದ ಅಭಿವೃದ್ದಿಗೆ ರೂ. 50 ಕೋಟಿ ಅನುದಾನ ಬಿಡುಗಡೆಗೊಳಿಸಿದ್ದು ಉದಗಟ್ಟದ ಬಳಿ ಸೇತುವೆ, ಜಿನಿಗಿ ಹಳ್ಳದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕೆ ತಲಾ ರೂ. 10 ಕೋಟಿ ಮೀಸಲು, ಉಳಿದ ರೂ. 40 ಕೋಟಿ ವೆಚ್ಚದಲ್ಲಿ ಪಟ್ಟಣದ ಹಳೆ ತಾಲ್ಲೂಕು ಕಛೇರಿ ತೆರವುಗೊಳಿಸಿ ತಾಲ್ಲೂಕು ಕಛೇರಿಗಳ ಸಂಕೀರ್ಣ ಕಟ್ಟಡ, ನಿರ್ಮಾಣ ಹಾಗೂ ಶಿಥಿಲಗೊಂಡ ವಿವಿಧ ಶಾಲಾ ಕಟ್ಟಡಗಳನ್ನು ದುರಸ್ತಿಗೊಳಿಸಲಾಗುವುದು ಎಂದು ಶಾಸಕ ಬಿ.ದೇವೇಂದ್ರಪ್ಪ ತಿಳಿಸಿದರು.

ಕ್ಷೇತ್ರದ ಸ್ಥಳೀಯ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಕಂಕಣ ಬದ್ದನಾಗಿ ಶಿಕ್ಷಣ, ಆರೋಗ್ಯ, ಆಹಾರ, ಮೂಲಸೌಕರ್ಯಕ್ಕೆ ಆದ್ಯತೆ ನೀಡುವೆ. ಪಟ್ಟಣದಲ್ಲಿ ರಸ್ತೆ ಅಗಲೀಕರಣಗೊಳಿಸಿ ಸುಂದರ ನಗರವನ್ನಾಗಿಸುವೆ.

ಸಾರ್ವಜನಿಕರು ಕೈಜೋಡಿಸಬೇಕು. ಅಲ್ಲದೆ ಫೆ.12 ರಂದು ನಡೆಯಲಿರುವ ಬಜೆಟ್ ಅಧಿವೇಶನದಲ್ಲಿ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಚರ್ಚಿಸುವೆ ಎಂದು ಭರವಸೆ ನೀಡಿದರು.

ಕೆಪಿಸಿಸಿ ಎಸ್‌ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಪಪಂ ಸದಸ್ಯರಾದ ಶ್ರೀಮತಿ ನಿರ್ಮಲಾ ಕುಮಾರಿ, ಆರ್.ತಿಪ್ಪೇಸ್ವಾಮಿ, ರಮೇಶ್ ರೆಡ್ಡಿ ಮಾತನಾಡಿದರು.

ತಹಶೀಲ್ದಾರ್ ಸೈಯ್ಯದ್ ಕಲೀಂ ಉಲ್ಲಾ, ಧ್ವಜಾರೋಹಣ ನೆರವೇರಿಸಿ, ವಂದನೆ ಸ್ವೀಕರಿಸಿದರು.

ವಿವಿಧ ಶಾಲಾ ಮಕ್ಕಳಿಂದ ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.

ಸಮಾರಂಭದಲ್ಲಿ ತಾ.ಪಂ.ಇಓ ಕರಿಬಸಪ್ಪ, ಬಿಇಓ ಹಾಲಮೂರ್ತಿ, ಪ.ಪಂ. ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಪಿಐ ಶ್ರೀನಿವಾಸ್ ರಾವ್, ಕೆಪಿಸಿಸಿ ಸದಸ್ಯ ಕಲ್ಲೇಶ್ ರಾಜ್ ಪಟೇಲ್, ಪ.ಪಂ. ಸದಸ್ಯರಾದ ಲುಕ್ಮಾನ್ ಖಾನ್, ನವೀನ್ ಕುಮಾರ್, ಲಲಿತ ಶಿವಣ್ಣ, ಶಕೀಲ್ ಅಹಮ್ಮದ್, ರವಿಕುಮಾರ್, ಪಾಪಲಿಂಗಪ್ಪ, ದೇವರಾಜ್, ಮುಖಂಡರಾದ ಬಿ.ಮಹೇಶ್ವರಪ್ಪ, ಪಲ್ಲಾಗಟ್ಟೆ ಶೇಖರಪ್ಪ, ಹಟ್ಟಿ ತಿಪ್ಪೇಸ್ವಾಮಿ, ಓಬಣ್ಣ, ಶಂಭುಲಿಂಗಪ್ಪ ಸೇರಿದಂತೆ, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

# ಸಂವಿಧಾನದ ಆಶಯದಲ್ಲಿ ಭಾರತ ಗಣರಾಜ್ಯ ಬಲಿಷ್ಠ : ವಾಮದೇವಪ್ಪ



ದಾವಣಗೆರೆ, ಜ. 28- ಸಂವಿಧಾನದ ಆಶಯದಲ್ಲಿ ಭಾರತ ಗಣ ರಾಜ್ಯ ಬಲಿಷ್ಠವಾಗಿದೆ. ಸಂವಿಧಾನದ ವಿಧಿಗಳು ಸರ್ವರಿಗೂ ರಕ್ಷಣೆ ಆಗಿವೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ ಹೇಳಿದರು.

ಇಲ್ಲಿನ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿನೂತನ ಮಹಿಳಾ ಸಮಾಜದ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ 75ನೇ ಗಣ ರಾಜ್ಯೋತ್ಸವ ಹಾಗೂ ಕರ್ನಾಟಕ ಸಂಭ್ರಮ ಮಾಲಿಕೆ -3 ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯದ ನಂತರ 526 ಸಂಸ್ಥಾನಗಳನ್ನು ಒಗ್ಗೂಡಿಸಿದ್ದು, ಮಹತ್ತರ ಸಾಧನೆ. ವಿಶ್ವ ಕನ್ನಡ ಸಮ್ಮೇಳನ ದಾವಣಗೆರೆಯಲ್ಲಿ ನಡೆಯುವ ಸಿದ್ಧತೆಗಳು ನಡೆಯುತ್ತಿವೆ. ನಿರ್ಧಾರ ಅಂತಿಮಗೊಂಡರೆ, ಎಲ್ಲಾ ಸಂಘ-ಸಂಸ್ಥೆಗಳು ಸಹಕರಿಸಬೇಕು. ಕನ್ನಡ ನಾಡು-ನುಡಿ ಏಳಿಗೆಗೆ ಸದಾ ಬದ್ಧ ಎಂದರು.

ಪ್ರಾಧ್ಯಾಪಕಿ ಬಿ.ಜೆ.ಸಿದ್ದಲಿಂಗಮ್ಮ ಮಾತನಾಡಿ, ಭಾರತ ವಿವಿಧತೆಯಲ್ಲಿ ಏಕತೆ ಹೊಂದಿದೆ. ಸುಸಂಸ್ಕೃತ ದೇಶ. ಇಂದಿನ ಮಕ್ಕಳಲ್ಲಿ ಸಂಸ್ಕೃತಿ ಛಾಯೆಯ ನಡವಳಿಕೆ ಕುಸಿಯುತ್ತಿದೆ. ತಂದೆ-ತಾಯಿ, ಶಿಕ್ಷಕರು ಮಕ್ಕಳಲ್ಲಿ ಸಂಸ್ಕೃತಿ ಬಿಂಬಿಸುವರು. ನಮ್ಮ ಸಂಸ್ಕೃತಿ ಬಗ್ಗೆ ಗೌರವ ತೋರಿದರೆ ಮಕ್ಕಳಲ್ಲಿ ಅದು ಸ್ಥಿರವಾಗಿರುತ್ತದೆ. ಕರ್ನಾಟಕ ಹಲವು ಪ್ರಥಮಗಳಿಗೆ ಮುನ್ನುಡಿ ಬರೆದಿದೆ. ಸಮಾಜವಾದ, ಜಾತ್ಯತೀತ ನಿಲುವು 12ನೇ ಶತಮಾನದಲ್ಲೇ ನೆಲೆಗೊಂಡಿದ್ದವು ಎಂದು ಹೇಳಿದರು.

ವಿವಿಧ ಸ್ಪರ್ಧೆಗಳಲ್ಲಿ ಜಯ ಗಳಿಸಿದ ಮಹಿಳೆಯರಿಗೆ ಬಹುಮಾನ ವಿತರಿಸಲಾಯಿತು.

ವಿನೂತನ ಮಹಿಳಾ ಸಂಘದ ಅಧ್ಯಕ್ಷೆ ರೇಖಾ ಓಂಕಾರಪ್ಪ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿಗಳಾದ ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ ಮಾತನಾಡಿದರು. ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಸಹ ಕಾರ್ಯದರ್ಶಿ ಕೆ.ಎಸ್.ವೀರೇಶ್ ಪ್ರಸಾದ್, ಪದಾಧಿಕಾರಿ ಸತ್ಯಭಾಮ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ ಬಿ ಪರಮೇಶ್ವರಪ್ಪ ಇದ್ದರು.

ಲೀಲಾ ಕುಬೇರಪ್ಪ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಚೇತನ ಮಂಜುನಾಥ್ ಸ್ವಾಗತಿಸಿದರು, ರೂಪ ಶಂಕರ ಮೂರ್ತಿ ವಂದಿಸಿದರು.

# ಗಣರಾಜ್ಯೋತ್ಸವ ಭಾರತೀಯರ ಪಾಲಿಗೆ ವರದಾನ : ಬಸವಂತಪ್ಪ



ದಾವಣಗೆರೆ, ಜ. 28- ಜನವರಿ 26 ರಂದು ಆಚರಿಸಲಾಗುವ ಗಣರಾಜ್ಯೋತ್ಸವ ದಿನ ಪ್ರತಿ ಭಾರತೀಯನ ಪಾಲಿಗೆ ಹೆಮ್ಮೆಯ ದಿನವಾಗಿದೆ. ಸ್ವಾತಂತ್ರ್ಯ ದಿನಾಚರಣೆಯನ್ನು ಎಷ್ಟು ಸಂಭ್ರಮದಿಂದ ಆಚರಣೆ ಮಾಡಲಾಗುತ್ತದೆಯೋ, ಅಷ್ಟೇ ಸಂಭ್ರಮದಿಂದ ದೇಶದಲ್ಲಿ ಗಣರಾಜ್ಯೋತ್ಸವವನ್ನು ಆಚರಣೆ ಮಾಡಲಾಗುತ್ತದೆ ಎಂದು ಶಾಸಕ ಕೆ.ಎಸ್. ಬಸವಂತಪ್ಪ ಹೇಳಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಕೇಂದ್ರ ವ್ಯಾಪ್ತಿಯ ಮಾಯಕೊಂಡ ಗ್ರಾಮದ ಕರ್ನಾಟಕ ಪಬ್ಲಿಕ್ ಪ್ರೌಢಶಾಲೆ ಆವರಣದಲ್ಲಿ ಆಯೋಜಿಸಿದ್ದ 75ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಆಗಸ್ಟ್ 15, 1947 ಬ್ರಿಟಿಷರಿಂದ ತಾತ್ವಿಕವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡ ದಿನವಾದರೆ, ಜನವರಿ 26, 1950 ಭಾರತ ತನ್ನ ಸಂವಿಧಾನವನ್ನು ಜಾರಿಗೊಳಿಸಿದ ದಿನವಾಗಿದೆ. ರಾಜ ಪ್ರಭುತ್ವವನ್ನು ತ್ಯಜಿಸಿ ಪ್ರಜಾಪ್ರಭುತ್ವದಲ್ಲಿ ತನ್ನ ನಿಜ ಅಸ್ತಿತ್ವವನ್ನು ಸ್ಥಾಪಿಸಿದ ದಿನವಾಗಿದೆ. ಈ ಕಾರಣಕ್ಕಾಗಿ ಗಣರಾಜ್ಯೋತ್ಸವ ಭಾರತೀಯರ ಪಾಲಿಗೆ ಅತ್ಯಂತ ಮಹತ್ವದ ದಿನವಾಗಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಶಿವಮ್ಮ, ಉಪತಹಸೀಲ್ದಾರ್ ಹಾಲೇಶಪ್ಪ, ಕಂದಾಯ ಅಧಿಕಾರಿ ಶ್ರೀನಿವಾಸ್, ಪಿಡಿಓ ಶ್ರೀನಿವಾಸ್, ಸಿಪಿಐ ನಾಗರಾಜ್, ಹಿರೇಗೌಡ್ರು ಸೇರಿದಂತೆ ಇನ್ನಿತರರಿದ್ದರು.

# ಕೊಟ್ಟೂರು : ಸಂಭ್ರಮದ ಗಣರಾಜ್ಯೋತ್ಸವ



ಕೊಟ್ಟೂರು, ಜ. 28- ತಾಲ್ಲೂಕಿನ ಜ್ಯೂನಿಯರ್ ಕಾಲೇಜ್ ಕ್ರೀಡಾಂಗಣದಲ್ಲಿ ತಾಲ್ಲೂಕು ಆಡಳಿತದ ವತಿಯಿಂದ75 ನೇ ಗಣರಾಜ್ಯೋತ್ಸವದಿನಾಚರಣೆಯ ಸಮಾರಂಭವನ್ನು ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದ ನಿಮಿತ್ತ ತಾಲ್ಲೂಕು ದಂಡಾಧಿಕಾರಿ ಜಿ.ಕೆ. ಅಮರೇಶ್ ಮತ್ತು ಶಾಸಕ ಕೆ. ನೇಮಿರಾಜ್ ನಾಯ್ಕ್ ಧ್ವಜಾರೋಹಣ ನೆರವೇರಿಸಿದರು.

ತಾಲ್ಲೂಕಿನ ಜ್ಯೂ. ಕಾಲೇಜು ಮೈದಾನದಲ್ಲಿ 75ನೇ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಪಿಎಸ್‌ಐ ಗೀತಾಂಜಲಿ ಶಿಂಧೆ ಅವರು ಪಥ ಸಂಚಲನ ನಡೆಸಿದರು. ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಎ. ನಸರುಲ್ಲಾ, ಸಿಪಿಐ ವೆಂಕಟಸ್ವಾಮಿ, ಇಸಿಓ ಅಜ್ಜಪ್ಪ, ನಿಂಗಪ್ಪ, ಡಿಆರ್‌ಪಿ ಮತ್ತು ಸಿಆರ್‌ಪಿ , ಶಶಿಧರ್ ಮೈದೂರು ಸೇರಿದಂತೆ, ತಾಲ್ಲೂಕು ಆಡಳಿತದ ಸಿಬ್ಬಂದಿಗಳು ಇದ್ದರು.

# ವಚನಾನಂದ ಶ್ರೀಗಳ ಆಶೀರ್ವಾದ ಪಡೆದ ಜಗದೀಶ್ ಶೆಟ್ಟರ್



ಬೆಂಗಳೂರು, ಜ.28- ಬೆಂಗಳೂರಿನ ಶ್ವಾಸಯೋಗ ಸಂಸ್ಥೆಗೆ ಭೇಟಿ ನೀಡಿದ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು, ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಮಾಜಿ ಸಚಿವರುಗಳಾದ ಶಂಕರ್ ಪಾಟೀಲ್ ಮುನೇನಕೊಪ್ಪ, ಎಂ.ಪಿ.ರೇಣುಕಾ ಚಾರ್ಯ ಹಾಗೂ ಶ್ರೀ ಮಲ್ಲಿಕಾರ್ಜುನ ಬಾಳಿಕಾಯಿ ಉಪಸ್ಥಿತರಿದ್ದರು.

# ಡಿಸಿಸಿ ಬ್ಯಾಂಕಿಗೆ ಹನಗವಾಡಿ ಕುಮಾರ್ ಆಯ್ಕೆ: ಹರಿಹರ ತಾ.ನಲ್ಲಿ ಸಂಭ್ರಮ



ಮಲೇಬೆನ್ನೂರು, ಜ.28- ಗುರುವಾರ ದಾವಣಗೆರೆ ಡಿಸಿಸಿ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ ಹರಿಹರ ತಾಲ್ಲೂಕಿನ 'ಎ' ವರ್ಗದಿಂದ ಸ್ಪರ್ಧಿಸಿದ್ದ ಹನಗವಾಡಿಯ ಡಿ.ಕುಮಾರ್ ಅವರು 16 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಪುನರಾಯ್ಕೆ ಬಯಸಿದ್ದ ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಹೊಳೆಸಿರಿಗೆರೆಯ ಬಿ.ಹಾಲೇಶಪ್ಪ ಅವರು 13 ಮತಗಳನ್ನು ಪಡೆದು ಪರಾಭವಗೊಂಡರು. ಒಟ್ಟು 29 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತದಾನಕ್ಕೆ ಅರ್ಹತೆ ಪಡೆದ್ದವು.

**ಸಂಭ್ರಮಾಚರಣೆ :** ಚುನಾವಣೆಯಲ್ಲಿ ಡಿ.ಕುಮಾರ್ ಅವರು ವಿಜಯಶಾಲಿಯಾಗಿ ಹೊರ ಬಂದ ತಕ್ಷಣ ಕಾಂಗ್ರೆಸ್ ಕಾರ್ಯಕರ್ತರು, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಸಮ್ಮುಖದಲ್ಲಿ ವಿಜಯೋತ್ಸವ ಆಚರಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಬಿ.ಅಬೀದ್ ಅಲಿ, ಎಲ್. ಬಿ.ಹನುಮಂತಪ್ಪ, ಮುಖಂಡರಾದ ಎಸ್.ಜಿ.ಪರಮೇಶ್ವರಪ್ಪ, ಜಿ.ಮಂಜುನಾಥ್ ಪಟೇಲ್, ಜಿಗಳಿ ಆನಂದಪ್ಪ, ಸಿರಿಗೆರೆ ರಾಜಣ್ಣ, ಬಿ.ವೀರಯ್ಯ, ವೈ.ದ್ಯಾವಪ್ಪರೆಡ್ಡಿ, ಹರಿಹರ ನಗರಸಭೆ ಸದಸ್ಯ ಸಿದ್ದೇಶ್, ಮಲೇಬೆನ್ನೂರಿನ ತಳಸದ ಬಸವರಾಜ್, ಕೆ.ಪಿ.ಗಂಗಾಧರ್, ಪಿ.ಆರ್.ಕುಮಾರ್, ಪಿ.ಹೆಚ್.ಶಿವಕುಮಾರ್, ಕುಂಬಳೂರು ವಾಸು, ಸಿ.ಅಬ್ದುಲ್ ಹಾದಿ, ಯುನೂಸ್, ಕೊಕ್ಕನೂರು ಸೋಮಶೇಖರ್, ಹನಗವಾಡಿಯ ಬಣಕಾರ್ ಪ್ರಸನ್ನ, ಸಾರಥಿ ಮಂಜುನಾಥ್, ವಕೀಲ ಡಿ. ಮಂಜುನಾಥ್, ರುದ್ರಮುನಿ, ಕ್ಯಾತನಹಳ್ಳಿ ಪಾಲಾಕ್ಷಪ್ಪ, ಛೇರ್ಮನ್ ವಿಜಯಕುಮಾರ್, ಪಿ.ಮಂಜುನಾಥ್, ಆರ್.ಟಿ.ವಿಜಯಕುಮಾರ್, ಅಪ್ಪಿ, ಬಿ. ಎಂ.ಸಿದ್ದೇಶ್, ಬೆಳ್ಳೂಡಿಯ ಸಿದ್ದಾರ್ಥ ಶಿವಕುಮಾರ್, ಹರಗನಹಳ್ಳಿ ರಾಜು ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

# ಭವಿಷ್ಯ ನಿರ್ಧರಿಸುವ ಯುವ ಪಡೆ



ದಾವಣಗೆರೆ, ಜ.28- ದೇಶದ ಭವಿಷ್ಯ ನಿರ್ಧರಿಸುವ ನಿರ್ಣಾಯಕ ಸ್ಥಾನದಲ್ಲಿ ಈ ದೇಶದ ಯುವ ಮತದಾರರಿದ್ದಾರೆ. ಈ ಹಿನ್ನೆಲೆಯಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡದೇ ಇರುವವರು ಕೂಡಲೇ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿ ಮತದಾನದ ಹಕ್ಕನ್ನು ಪಡೆಯುವಂತೆ ಜಿ.ಎಂ. ಸಿದ್ಧೇಶ್ವರ ಹೇಳಿದರು.

ಜಿ.ಎಂ.ಐ.ಟಿ ಸಭಾಂಗಣದಲ್ಲಿ ಬಿ.ಜೆ.ಪಿ ಯುವಮೋರ್ಚಾ ವತಿಯಿಂದ ನಡೆದ 'ಯುವ ಮತದಾರರ ಸಮ್ಮೇಳನ' ದಲ್ಲಿ ಅವರು ಮಾತನಾಡಿದರು.

ಮತದಾನ ನಮ್ಮೆಲ್ಲರಿಗೂ ದೊರಕಿರುವ ಹಕ್ಕು. ಇದನ್ನು ಸರಿಯಾದ ರೀತಿಯಲ್ಲಿ ಸದುಪಯೋಗ ಪಡಿಸಿಕೊಳ್ಳುವಂತೆ ಯುವ ಮತದಾರರಿಗೆ ಕರೆ ನೀಡಿದರು.

ಯುವಕರು ಕೇವಲ ಹಕ್ಕುಗಳ ಬಗ್ಗೆ ಮಾತನಾಡಬಾರದು, ಮೂಲಭೂತ ಕರ್ತವ್ಯಗಳ ಬಗ್ಗೆ ಚಿಂತಿಸುವ ಅನಿವಾರ್ಯತೆಯಿದೆ, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಯೂ ಕೂಡ ಮತದಾನದಿಂದ ದೂರ ಉಳಿಯುವುದು ಭ್ರಷ್ಟಾಚಾರ ಮಾಡಿದಂತೆ, ಕೇವಲ ಲಂಚ ಪಡೆಯುವುದು ಮಾತ್ರ ಭ್ರಷ್ಟಾಚಾರವಲ್ಲ, ಮತದಾನದಿಂದ ದೂರ ಉಳಿಯುವುದು ಕೂಡ ಭ್ರಷ್ಟಾಚಾರ ಎಂದರು.

ಕಾರ್ಯಕ್ರಮದಲ್ಲಿ ಬಿ.ಜೆ.ಪಿ. ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಯುವಮೋರ್ಚಾ ಅಧ್ಯಕ್ಷ ಶಿವಪ್ರಕಾಶ್, ಮಾಜಿ ಮೇಯರ್ ಎಸ್. ಟಿ. ವೀರೇಶ್, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಶ್ರೀನಿವಾಸ್ ದಾಸಕರಿಯಪ್ಪ, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಹಾಲುವರ್ತಿ ಶ್ರೀಧರ್ ಉಪಸ್ಥಿತರಿದ್ದರು.

# ಜಗಳೂರು; ರಾಗಿ ಹಣಕ್ಕೆ ಪ್ರತಿಭಟನೆ

## ಮನವೊಲಿಸಿದ ನಂತರ ಹೋರಾಟ ಹಿಂಪಡೆದ ರೈತರು



ಜಗಳೂರು, ಜ.28- ಪಟ್ಟಣದ ಎಪಿಎಂಸಿ ಆವರಣದಲ್ಲಿ ರಾಗಿ ಹಣಕ್ಕಾಗಿ ಆಗ್ರಹಿಸಿ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಕೈಗೊಂಡ ರೈತರಿಗೆ 9 ನೇ ದಿನದಂದು ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಉಪನಿರ್ದೇಶಕ ಸಿದ್ದರಾಮ ಮಾರಿಹಾಳ್ ಸ್ಥಳಕ್ಕೆ ಭೇಟಿ ನೀಡಿ ಮನವೊಲಿಸಿ, ಶೀಘ್ರ ಹಣ ಪಾವತಿಸಲಾಗುವುದು ಎಂದು ತಿಳಿಸಿದ ನಂತರ ತಾತ್ಕಾಲಿಕವಾಗಿ ಪ್ರತಿಭಟನೆ ಹಿಂಪಡೆದಿದ್ದಾರೆ.

ಉಪನಿರ್ದೇಶಕ ಸಿದ್ದರಾಮ ಮಾರಿಹಾಳ್ ಮಾತನಾಡಿ, ಶಾಸಕರು ನಿಮ್ಮ ಸಮಸ್ಯೆ ಇತ್ಯರ್ಥಪಡಿಸಲು ಭರವಸೆ ನೀಡಿದ್ದಾರೆ. ಕಳೆದ ಮಂಗಳವಾರದಂದು ತಮ್ಮ ಅಗತ್ಯ ದಾಖಲೆಗಳನ್ನು ಸರ್ಕಾರಕ್ಕೆ ರವಾನಿಸಿದ್ದು, ಮೊದಲು 108 ಫಲಾನುಭವಿಗಳಿಗೆ ಹಾಗೂ ನಂತರ ಹಂತ ಹಂತವಾಗಿ ಹಣ ಪಾವತಿಸಲಾಗುವುದು, ರೈತರು ಸಹಕರಿಸಬೇಕಿದೆ. ಪಡಿತರ ಅಕ್ಕಿ ವಿತರಣಾ ಲಾರಿಗಳಿಗೆ ಅಡ್ಡಲಾಗಿರುವ ಹೋರಾಟವನ್ನು ಹಿಂಪಡೆದು ಪಿಡಿಎಸ್ ಗೆ ಅವಕಾಶ ಕೊಡಬೇಕು ಎಂದು ಮನವೊಲಿಸಿದರು.

"ನಾವು ಗುರುವಾರದವರೆಗೆ ಸರ್ಕಾರದಿಂದ ರಾಗಿ ಹಣ ಪಾವತಿ ಸುದ್ದಿಗಾಗಿ ಕಾಯುತ್ತಿದ್ದು, ಇದೀಗ ತಾತ್ಕಾಲಿಕವಾಗಿ ಹೋರಾಟ ಹಿಂಪಡೆಯುತ್ತಿದ್ದೇವೆ. ಎಲ್ಲಾ ಫಲಾನುಭವಿಗಳಿಗೆ ಕಡ್ಡಾಯವಾಗಿ ಹಣ ಪಾವತಿಯಾಗದಿದ್ದರೆ ಪಿಡಿಎಸ್‌ಗೆ ತಡೆಹಿಡಿದು ಪುನಃ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ರೈತ ಮುಖಂಡರಾದ ಆಕನೂರು ನಿಂಗಪ್ಪ, ಮಾರುತಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಅಧಿಕಾರಿ ಮನು, ಆಹಾರ ಇಲಾಖೆಯ ಶಿವಪ್ರಕಾಶ್, ರೈತರಾದ ಅನಿತಾ, ರೇವಣ್ಣ, ಸ್ವಾಮಿ, ತಿಪ್ಪೇಸ್ವಾಮಿ, ಸಿದ್ದಪ್ಪ ಇತರರಿದ್ದರು.

# ಬ್ಲಾಕ್ ಕಾಂಗ್ರೆಸ್‌ಗೆ ಅಂಜಿನಪ್ಪ ಅಧ್ಯಕ್ಷ: ಸಂಭ್ರಮ



ಹರಪನಹಳ್ಳಿ, ಜ.28- ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಇಲ್ಲಿನ ಪುರಸಭಾ ಹಿರಿಯ ಸದಸ್ಯ ಎಂ.ವಿ.ಅಂಜಿನಪ್ಪ ಅವರು ನೇಮಕವಾಗಿದ್ದಕ್ಕೆ ಅವರ ಬೆಂಬಲಿಗರು ಪಟ್ಟಣದ ವಿವಿಧೆಡೆ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಮೊದಲಿಗೆ ಪಟ್ಟಣದ ಹರಿಹರ ವೃತ್ತದಲ್ಲಿ ಜಮಾವಣೆಗೊಂಡ ಕಾರ್ಯಕರ್ತರು ಸಿಹಿ ವಿತರಿಸಿ, ಪಟಾಕಿ ಸಿಡಿಸಿ, ಜೈಕಾರ ಕೂಗಿದರು. ನಂತರ ಪ್ರವಾಸಿ ಮಂದಿರ ವೃತ್ತದಲ್ಲಿ ಸೇರಿ ಅಲ್ಲೂ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಿಸಿದರು.

ಈ ಸಂಭ್ರಮೋತ್ಸವದಲ್ಲಿ ಪುರಸಭಾ ಸದಸ್ಯರುಗಳಾದ ಲಾಟಿ ದಾದಾಪೀರ್, ಉದ್ದಾರ ಗಣೇಶ್, ಗೊಂಗಡಿ ನಾಗರಾಜ್, ಮುಖಂಡರಾದ ಚಿಕ್ಕೇರಿ ಬಸಪ್ಪ, ಸಣ್ಣ ಹಾಲಪ್ಪ, ಎಲ್.ಮಂಜಾನಾಯ್ಕ, ಎನ್.ಶಂಕರ್, ಉದಯಶಂಕರ್, ಅಗ್ರಹಾರ ಅಶೋಕ್, ಶಶಿಕುಮಾರನಾಯ್ಕ, ಅಂಡಿ ಅಂಜಿನಪ್ಪ, ಗುಡಿ ನಾಗರಾಜ್, ಉಪ್ಪಾರ ಹನುಮಂತಪ್ಪ, ಎಂ.ವಿ. ಕೃಷ್ಣ, ಮತ್ತೂರು ಬಸವರಾಜ, ಶಿವರಾಜ, ಪೈಲ್ವಾನ್ ಬಸಪ್ಪ ಮಂಜು ತಿಪ್ಪನಹಳ್ಳಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಸಂವಿಧಾನದಿಂದ ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳು

## ಹರಪನಹಳ್ಳಿಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ: ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್

ಹರಪನಹಳ್ಳಿ, ಜ.28- ಸಂವಿಧಾನ ಜಾರಿಯಿಂದಲೇ ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳು ಸಿಕ್ಕಿವೆ. ಆದ್ದರಿಂದ ಸಂವಿಧಾನವನ್ನು ಪ್ರತಿಯೊಬ್ಬರೂ ಗೌರವಿಸಬೇಕು ಎಂದು ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಹೇಳಿದರು.

ಅವರು ಪಟ್ಟಣದ ಸ್ಟೇಡಿಯಂನಲ್ಲಿ ತಾಲ್ಲೂಕು ಆಡಳಿತದ ವತಿಯಿಂದ 75ನೇ ಗಣರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂವಿಧಾನದಿಂದ ದೇಶದ ಪ್ರತಿಯೊಬ್ಬ ಪ್ರಜೆಗೂ ಸಹ ಸಮಾನ ಶಿಕ್ಷಣ, ಶಿಕ್ಷಣ ಹಕ್ಕುಗಳು, ಮೂಲಭೂತ ಹಕ್ಕುಗಳು, ಧಾರ್ಮಿಕ ಹಕ್ಕುಗಳು ದಕ್ಕಿದ್ದು ಎಂದರು.

ಆದ್ದರಿಂದ ಸಂವಿಧಾನ ರಚಿಸಿದ ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಅವರ ತಂಡವನ್ನು ಇಂದು ಸ್ಮರಿಸಬೇಕಾಗಿದೆ ಎಂದರು. ಸಂವಿಧಾನದಿಂದ ಎಲ್ಲದರಲ್ಲೂ ಸ್ವಾತಂತ್ರ್ಯ ಸಿಕ್ಕಿದೆ ಎಂದು ಸ್ವೇಚ್ಛಾಚಾರ ಬೇಡ ಎಂದು ಅವರು ಸಲಹೆ ನೀಡಿದರು.

**5 ಗ್ಯಾರಂಟಿಗಳಿಂದ ಕೊಟ್ಟ ಮಾತು ಈಡೇರಿಕೆ:** ಐದು ಗ್ಯಾರಂಟಿಗಳನ್ನು ಜಾರಿಗೊಳಿಸುವುದರ ಮೂಲಕ ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡಿದೆ ಎಂದು ಹೇಳಿದ ಅವರು, ಶಕ್ತಿ ಯೋಜನೆ ಮಹಿಳೆಯರಿಗೆ ಶಕ್ತಿ ನೀಡಿದೆ ಎಂದು ನುಡಿದರು.

**26.67 ಲಕ್ಷ ಮಹಿಳೆಯರು ಟ್ರಾವೆಲ್ :** ಶಕ್ತಿ ಯೋಜನೆಯಡಿ ತಾಲ್ಲೂಕಿನಲ್ಲಿ ಕಳೆದ ಡಿ.23 ರವರೆಗೆ 26.67 ಲಕ್ಷ ಮಹಿಳೆಯರು ಟ್ರಾವಲ್ ಮಾಡಿದ್ದು, ರಾಜ್ಯ ಸರ್ಕಾರದಿಂದ 8.69 ಕೋಟಿ ಹಣವನ್ನು ತುಂಬಲಾಗಿದೆ ಎಂದರು.

**65 ಸಾವಿರ ಉಚಿತ ವಿದ್ಯುತ್ ಗ್ರಾಹಕರು :** ತಾಲ್ಲೂಕಿನಲ್ಲಿ 200 ಯುನಿಟ್ ಒಳಗೆ ಉಚಿತ ವಿದ್ಯುತ್ತನ್ನು 65 ಸಾವಿರ ಫಲಾನುಭವಿಗಳು ಬಳಸಿಕೊಂಡಿದ್ದಾರೆ. 65 ಸಾವಿರಕ್ಕಿಂತ ಹೆಚ್ಚು



ಮಹಿಳೆಯರು ಗೃಹಲಕ್ಷ್ಮಿ ಯೋಜನೆ ಪಲಾನುಭವಿಗಳು ಇದ್ದಾರೆ ಎಂದು ಅವರು ನುಡಿದರು.

ಆದ್ದರಿಂದ ನಮ್ಮದು ಮಾತಿಗೆ ತಪ್ಪದ ಸರ್ಕಾರವಾಗಿದೆ ಎಂದು ಅವರು ತಿಳಿಸಿದರು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಉಪವಿಭಾಗಾಧಿಕಾರಿ ಟಿ.ವಿ.ಪ್ರಕಾಶ್ ಅವರು, ನಾವು ಮಾಡುವ ಕರ್ತವ್ಯವನ್ನು ಉತ್ತಮವಾಗಿ ಮಾಡಿ ದೇಶಕ್ಕೆ, ರಾಜ್ಯಕ್ಕೆ ಉತ್ತಮ ಹೆಸರು ತರಬೇಕು. ದೇಶದ ಎಲ್ಲಾ ರಾಜ್ಯಗಳನ್ನು ಒಂದು ಸಂವಿಧಾನದ ಅಡಿ ತಂದು ಕೊಟ್ಟಂತಹ ದಿನ ಗಣರಾಜ್ಯೋತ್ಸವ ಎಂದು ತಿಳಿಸಿದರು.

ಪುರಸಭಾ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಮಾತನಾಡಿ ಸ್ವಾತಂತ್ರ್ಯ , ಸಮಾನತೆ, ಸಹೋದರತ್ವ, ಏಕತೆ, ಭ್ರಾತೃತ್ವ ನಮ್ಮ ಸಂವಿಧಾನದಲ್ಲಿ ಇರುವ ಐದು ಪ್ರಮುಖ ಮೌಲ್ಯಗಳು, ದೇಶದ ಸಂವಿಧಾನವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಎಂದು ತಿಳಿಸಿದರು.

ಕೃಷಿ, ಶಿಕ್ಷಣ, ತೋಟಗಾರಿಕೆ, ಅಗ್ನಿಶಾಮಕ ಇಲಾಖೆಗಳನ್ನು ಉತ್ತಮ ಸಾಧನೆ ಮಾಡಿದವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಪುರಸಭಾ ಸದಸ್ಯರುಗಳಾದ ಅಬ್ದುಲ್ ರಹಿಮಾನ್, ಉದ್ದಾರ ಗಣೇಶ್, ಲಾಟಿ ದಾದಾಪೀರ್, ಮಂಜುನಾಥ ಇಜಂತಕರ್, ಜಾಕೀರ್, ಚಿಕ್ಕೇರಿ ಹನುಮವ್ವ, ಡಿವೈಎಸ್ಪಿ ವೆಂಕಟಪ್ಪ ನಾಯಕ, ತಹಶೀಲ್ದಾರ್ ಬಿ.ವಿ.ಗಿರೀಶ್‌ಬಾಬು, ಸಿಪಿಐ ನಾಗರಾಜ್ ಎಂ. ಕಮ್ಮಾರ, ತಾ.ಪಂ ಇಒ ಪ್ರಕಾಶ್, ಬಿಆರ್‌ಸಿ ಹೊನ್ನತ್ತೆಪ್ಪ, ದೈಹಿಕ ಪರಿವೀಕ್ಷಕ ಷಣ್ಮುಖಪ್ಪ, ಆರ್‌ಎಫ್‌ಓ ಮಲ್ಲಪ್ಪ, ಶಿಕ್ಷಣ ಸಂಯೋಜಕ ಗಿರಜ್ಜಿ ಮಂಜುನಾಥ್, ಸಮಾಜ ಕಲ್ಯಾಣ ಇಲಾಖೆಯ ರೇಣುಕಾದೇವಿ, ಬಿಸಿಎಂನ ವಿಜಯಲಕ್ಷ್ಮಿ, ಸಹಾಯಕ ಕೃಷಿ ನಿರ್ದೇಶಕ ಬಿ.ಸಿ.ಉಮೇಶ್, ಗುಂಡಗತ್ತಿ ಕೊಟ್ರಪ್ಪ ಇದ್ದರು.

# ಬುದ್ಧಿಶಕ್ತಿ ಬೆಳವಣಿಗೆಗೆ ಚೆಸ್ ಸಹಕಾರಿ: ಮಲ್ಲೇಶ್



ದಾವಣಗೆರೆ, ಜ.28- ಜಿಲ್ಲಾ ಚೆಸ್ ಅಸೋಸಿಯೇಷನ್ ವತಿಯಿಂದ ಗಣರಾಜ್ಯೋತ್ಸವದ ಅಂಗವಾಗಿ 'ರಿಪಬ್ಲಿಕ್ ಡೇ ಕಪ್ ಓಪನ್ ರಾಪಿಡ್ ಚೆಸ್ ಪಂದ್ಯಾವಳಿ' ನಗರದ ಗುರುಭವನದಲ್ಲಿ ಭಾನುವಾರ ನಡೆಯಿತು.

ಪತ್ರಕರ್ತ ಬಿ.ಎನ್. ಮಲ್ಲೇಶ್ ಪಂದ್ಯಾವಳಿಗೆ ಚಾಲನೆ ನೀಡಿ, ಮಕ್ಕಳ ಬುದ್ಧಿ ಶಕ್ತಿ ಬೆಳವಣಿಗೆಗೆ ಚೆಸ್ ಸಹಕಾರಿಯಾಗಿದೆ ಎಂದರು. ಪೋಷಕರು ತಮ್ಮ ಮಕ್ಕಳಿಗೆ ಮೊಬೈಲ್ ನೀಡದೇ ಇಂತಹ ಬುದ್ಧಿವಂತ ಕ್ರೀಡೆಗಳಲ್ಲಿ ಅಳವಡಿಸಿಕೊಳ್ಳಲು ಪ್ರೋತ್ಸಾಹಿಸಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಸಂಘದ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ, ಮಾಂತೇಶ್ ಜಿ. ಆಡಿಟರ್, ಎ.ನಾಗರಾಜ್, ಎಸ್.ಮಲ್ಲಿಕಾರ್ಜುನ್, ಅಲ್ಲಾವಲಿ ಮೊಹಮ್ಮದ್ ಖಾನ್, ಟಿ. ಯುವರಾಜ್, ಮಂಜುಳಾ ಯುವರಾಜ್, ಪವನ್ ಕುಮಾರ್, ಮೇಘರಾಜ್, ದೀಪಾ, ಬಸವರಾಜ್, ಮಲ್ಲೇಶ್ ಮುಂತಾದವರು ಭಾಗವಹಿಸಿದ್ದರು

ಮೂರು ವಿಭಾಗಗಳಲ್ಲಿ ಪಂದ್ಯಾವಳಿ ನಡೆಸಲಾಯಿತು. ಓಪನ್ ವಿಭಾಗದಲ್ಲಿ ಹೊನ್ನಾಳಿಯ ಸಚಿನ್ ಪಿ.ಎಸ್ ಪ್ರಥಮ ಸ್ಥಾನ, ದೀಕ್ಷಾಂತ್ ಗೋಕುಲ್ ಅರೋರ ದ್ವಿತೀಯ ಸ್ಥಾನ, ಡಾಕ್ಟರ್ ಸಮೀರ್ ಅಹ್ಮದ್ ತೃತೀಯ ಸ್ಥಾನ ಪಡೆದರು.

ಉಳಿದಂತೆ ವಿವಿಧ ಭಾಗಗಳಲ್ಲಿ ಮೊಹಮ್ಮದ್ ಆರ್ಯನ್, ಸಾತ್ವಿಕ ಎನ್.ಎ., ಭುವನಸಾಗರಿ, ತ್ರಿಶಾ ಬಿ.ಆರ್., ಅಮಿತ್ ಚಂದ್ರ.ಬಿ., ಸಾತ್ವಿಕ್ ನಾಯಕ್.ಎನ್., ಲಕ್ಷಿತ್ ದಯಾನಂದ್, ಅಪೇಕ್ಷ ಐ.ಡಿ., ದೇವದತ್ತ ಆರ್.ಕೊಟ್ವಾಲ್., ವೈಭವ್.ಜಿ, ದಿಗಂತ್.ಎಂ.ಎಸ್, ಸ್ವಯಂ ಎಂ.ಎಸ್, ನಿರಂಜನ್.ಎಂ., ಗಿರೀಶ್.ಜಿ.ಎನ್, ಅರ್ಘತ್.ಎ, ರಮ್ಯಾ ಕೆ.ಯು., ಸಮರ್ಥ್ ಪೂಜಾರ್ ಬಹುಮಾನಗಳನ್ನು ಪಡೆದಿದ್ದಾರೆ. ಶ್ರೀಮತಿ ಲತಿಕಾ ದಿನೇಶ್ ಕೆ.ಶೆಟ್ಟಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

# ಕಾಂತರಾಜ್ ವರದಿ ಸ್ವೀಕರಿಸುತ್ತೇವೆ

(1ನೇ ಪುಟದಿಂದ) ಗಣತಿ ಮಾಡಿಸುತ್ತೇವೆ ಎಂದು ರಾಹುಲ್ ಗಾಂಧಿ ಘೋಷಿಸಿದ್ದಾರೆ. ಕಾಂಗ್ರೆಸ್ ಪಕ್ಷ ಜಾತಿ ಗಣತಿಯ ಪರವಾಗಿದೆ. ಅಧಿಕಾರ ಇರಲಿ, ಇಲ್ಲದಿರಲಿ ನಾನು ಸದಾಕಾಲ ನಿಮ್ಮ ಪರವಾಗಿ ಇರುತ್ತೇನೆ ಎಂದು ಮುಖ್ಯಮಂತ್ರಿ ಹೇಳಿದರು.

ಬಾಬಾ ಸಾಹೇಬ್ ಅವರ ಸಂವಿಧಾನ ಇಲ್ಲದೇ ಹೋಗಿದ್ದರೆ ಕೆ.ಎಸ್. ಈಶ್ವರಪ್ಪ, ಸಿ.ಟಿ.ರವಿ ಮತ್ತು ಆರ್. ಅಶೋಕ್ ಶಾಸಕರಾಗಿ ವಿಧಾನಸಭೆ ಪ್ರವೇಶಿಸಲು ಸಾಧ್ಯವೇ ಇರಲಿಲ್ಲ. ಯಾರದ್ದೋ ಹೊಲ ಗದ್ದೆಗಳಲ್ಲಿ ಕೂಲಿ ಮಾಡುತ್ತಾ ಕೂರಬೇಕಾಗಿತ್ತು ಎಂದೂ ಮುಖ್ಯಮಂತ್ರಿ ಹೇಳಿದರು.

ಈ ಜಾತಿ ಶೋಷಣೆಗೆ ಕೊನೆ ಹಾಡುವ ಉದ್ದೇಶದಿಂದಲೇ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸಂವಿಧಾನ ನೀಡಿದರು. ಶಾಹು ಮಹಾರಾಜ್, ಜ್ಯೋತಿಬಾ ಫುಲೆ, ಬುದ್ದ, ಬಸವಣ್ಣ, ನಾರಾಯಣಗುರು, ನಾಲ್ವಡಿ ಅರಸರು, ವಿವೇಕಾನಂದ, ಕನಕದಾಸರೆಲ್ಲರೂ ಈ ಜಾತಿ ವ್ಯವಸ್ಥೆ ತೊಡೆದು ಹಾಕಲು ಶ್ರಮಿಸಿದರು. ನಮ್ಮ ಸಂವಿಧಾನ ಕೂಡ ಈ ಎಲ್ಲಾ ಮಹನೀಯರ ಆಶಯಗಳನ್ನು ಒಳಗೊಂಡಿದೆ ಎಂದರು. ಸಮಾವೇಶದಲ್ಲಿ ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಹೆಚ್.ಸಿ.ಮಹದೇವಪ್ಪ, ಸತೀಶ್ ಜಾರಕಿಹೊಳಿ, ಬೋಸ ರಾಜು, ಕೆ.ಹೆಚ್.ಮುನಿಯಪ್ಪ, ಭೈರತಿ ಸುರೇಶ್, ಸಂತೋಷ್ ಲಾಡ್, ಮಧು ಬಂಗಾರಪ್ಪ, ದಿನೇಶ್ ಗುಂಡೂರಾವ್, ಆರ್. ಬಿ. ತಿಮ್ಮಾಪುರ್, ನಾಗೇಂದ್ರ, ಡಿ.ಸುಧಾಕರ್, ಶಿವರಾಜ್ ತಂಗಡಗಿ, ರಹೀಂಖಾನ್ ಮತ್ತಿತರರು ಮಾತನಾಡಿದರು. ಕರ್ನಾಟಕ ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಅಧ್ಯಕ್ಷ ರಾಮಚಂದ್ರಪ್ಪ ಅವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ದಲಿತ ಸಂಘರ್ಷ ಸಮಿತಿ ಮುಖಂಡರಾದ ಮಾವಳ್ಳಿ ಶಂಕರ್, ಮಾಜಿ ಸಚಿವರಾದ ಹೆಚ್. ಎಂ.ರೇವಣ್ಣ, ಹೆಚ್.ಆಂಜನೇಯ ಮತ್ತಿತರರು ಉಪಸ್ಥಿತರಿದ್ದರು.

## ಜಾತಿ ಗಣತಿ ವರದಿಗೆ ಬದ್ಧ : ಡಿಕೆಶಿ

ಜಾತಿ ಗಣತಿ ವರದಿಗೆ ರಾಜ್ಯ ಸರ್ಕಾರ ಬದ್ಧವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಎಲ್ಲ ವರ್ಗದ ಜನರಿಗೆ ನ್ಯಾಯ ಒದಗಿಸಿಕೊಡುವ ಆಶಯ ಹೊಂದಿದ್ದಾರೆ. ದೇಶದ ಎಲ್ಲೆಡೆ ಜಾತಿ ಗಣತಿ ನಡೆಯಬೇಕು ಎಂಬುದಾಗಿ ಪ್ರತಿಪಾದಿಸಿದ್ದಾರೆ. ಇದಕ್ಕೆ ಕಾಂಗ್ರೆಸ್ ಬದ್ಧವಾಗಿದೆ ಎಂದು ಹೇಳಿದರು.

ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಡೊಳ್ಳು ಬಾರಿಸಿ ಸಮಾವೇಶಕ್ಕೆ ಚಾಲನೆ ನೀಡಿದರು. ಆದರೆ, ಚಾಲನೆ ನೀಡಿದ ತಕ್ಷಣವೇ ವೇದಿಕೆಯಿಂದ ನಿರ್ಗಮಿಸಿದರು.

## ಕುರಿ ಕಾಯೋನ ಮಗ ಎಂದು ವಿರೋಧ

**(1ನೇ ಪುಟದಿಂದ) ಬಂದ ಎಂಟು ತಿಂಗಳಲ್ಲಿ ಜಾರಿಗೆ ತಂದಿದ್ದು ಕಾಂಗ್ರೆಸ್ ಸರ್ಕಾರ ಅಲ್ಲವಾ? ಸಿದ್ದರಾಮಯ್ಯ ಅಲ್ಲವಾ? ಇದಕ್ಕಾಗಿ ಕೆಲವರು ನನ್ನ ವಿರೋಧ ಮಾಡುತ್ತಿದ್ದಾರೆ ಎಂದರು.**

**ಸಿದ್ದರಾಮಯ್ಯ ಬದಲಾವಣೆ ಮಾಡುತ್ತಾರೆ, ಮಹಿಳೆಯರಿಗೆ ಆರ್ಥಿಕ - ಸಾಮಾಜಿಕ ಶಕ್ತಿ ಕೊಡುತ್ತಾರೆ, ಹಿಂದುಳಿದವರಿಗೆ, ದಲಿತರಿಗೆ, ಅಲ್ಪಸಂಖ್ಯಾತರಿಗೆ ಹಾಗೂ ಬಡವರಿಗೆ ಶಕ್ತಿ ಕೊಡುತ್ತಾರೆ ಎಂದು ಕೆಲವರು ವಿರೋಧಿಸುತ್ತಾರೆ ಎಂದು ಮುಖ್ಯಮಂತ್ರಿ ಹೇಳಿದರು.**

# ಮೋದಿ ಮತ್ತೆ ಪ್ರಧಾನಿಯಾಗಲಿ

**(1ನೇ ಪುಟದಿಂದ)** ವಾಪಸ್ಸಾಗಿದ್ದೇನೆ. ವರಿಷ್ಠರು ತೆಗೆದುಕೊಳ್ಳುವ ನಿರ್ಧಾರದಂತೆ ನಡೆದುಕೊಳ್ಳುತ್ತೇನೆ ಎಂದರು. ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮುಂಬರುವ ಲೋಕಸಭಾ ಚುನಾವಣೆಗೆ ಸಮೀಕ್ಷೆ ನಡೆಸಿ ಸೂಕ್ತ ಅಭ್ಯರ್ಥಿಯನ್ನು ಆಯ್ಕೆ ಮಾಡಬೇಕು ಎಂದು ಹಿರಿಯ ನಾಯಕರಿಗೆ ಮನವಿ ಮಾಡಿಕೊಂಡಿದ್ದೇವೆ ಎಂದರು.

ಜಿಲ್ಲೆಯ ವಾಸ್ತವಾಂಶವನ್ನು ಮನವರಿಕೆ ಮಾಡಿಕೊಂಡು ಟಿಕೆಟ್ ನೀಡಬೇಕು ಎಂದು ನಾವು ಮನವಿ ಮಾಡಿಕೊಂಡಿದ್ದೇವೆ. ನಾಯಕರ ತೀರ್ಮಾನ ಕಾದು ನೋಡಬೇಕಿದೆ ಎಂದರು.

ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಮಾತನಾಡಿ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರು ತಿಳಿಸಿದ ಹಿನ್ನೆಲೆಯಲ್ಲಿ ಜಿಲ್ಲೆಯ ಮುಖಂಡರು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜೇಯಂದ್ರ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಅಹವಾಲು ತಿಳಿಸಿದೆವು ಎಂದರು.

ನಾನು ಯಾರ ವಿರುದ್ಧವೂ ಇಲ್ಲ. ಪಕ್ಷದ ಶಿಸ್ತಿನ ಸಿಪಾಯಿ. ಪಕ್ಷ ವಹಿಸಿದ ಕೆಲಸ ಮಾಡುತ್ತೇನೆ. ನಾಳೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕರೆದರೂ ಹೋಗುತ್ತೇನೆ. ಅವರು ನಮ್ಮ ನಾಯಕರು ಎಂದು ಹೇಳಿದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಮಾಜಿ ಶಾಸಕ ಗುರುಸಿದ್ದನಗೌಡ್ರು, ಮುಖಂಡರಾದ ಶಂಕರ ಮುನೇನಕೊಪ್ಪ, ಕಲ್ಲೇಶ್, ಡಾ. ರವಿಕುಮಾರ್, ಕೆ.ಬಿ. ಕೊಟ್ರೇಶ್, ಲೋಕಿಕೆರೆ ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

# ವಜಾಗೆ ಕುಮಾರಸ್ವಾಮಿ ಆಗ್ರಹ

**(1ನೇ ಪುಟದಿಂದ)** ಮುಖ್ಯಮಂತ್ರಿ ಅಪಮಾನ ಎಸಗಿದ್ದಾರೆ ಎಂದು ಕುಮಾರಸ್ವಾಮಿ ಆಕ್ಷೇಪಿಸಿದ್ದಾರೆ. ಸಾರ್ವಜನಿಕ ವೇದಿಕೆಯಲ್ಲಿ ಗೌರವಾನ್ವಿತ ರಾಷ್ಟ್ರಪತಿಗಳನ್ನು ಮುಖ್ಯಮಂತ್ರಿಯೊಬ್ಬರು ಸಂಬೋಧಿಸುವ ರೀತಿಯೇ ಇದು? ಸಿದ್ದರಾಮಯ್ಯನವರ ನಡವಳಿಕೆ ಕರ್ನಾಟಕಕ್ಕೆ ಅಂಟಿದ ಅಳಿಸಲಾಗದ ಕಳಂಕ. ಅವರ ಈ ಕೀಳುಮಾತು ದೇಶಕ್ಕೆ, ಸಂವಿಧಾನಕ್ಕೆ ಆಗಿರುವ ಘೋರ ಅಪಚಾರ ಎಂದೂ ಅವರು ಹೇಳಿದ್ದಾರೆ.

ನಿನ್ನೆಯ ದಿನ ಚಾಮರಾಜನಗರದಲ್ಲಿ ಇದೇ ಸಿದ್ದರಾಮಯ್ಯನವರ ಪುತ್ರ ಯತೀಂದ್ರ ಭಾಷಣ ಮಾಡುತ್ತಿದ್ದಾಗ ಯಾರೋ ಒಬ್ಬರು ಏಕವಚನದಲ್ಲಿ ಪ್ರಶ್ನಿಸಿದರೆಂಬ ಕಾರಣಕ್ಕೆ ಪೊಲೀಸರು ಆತನನ್ನು ಅಟ್ಟಾಡಿಸಿಕೊಂಡು ಹೋಗಿ ಬಂಧಿಸಿ ದರದರನೇ ಎಳೆದುಕೊಂಡು ಹೋದರು. ಹಾಗಿದ್ದರೆ, ರಾಷ್ಟ್ರಪತಿಗಳನ್ನೇ ಏಕವಚನದಲ್ಲಿ ಸಂಬೋಧಿಸಿದ ಈ ಮುಖ್ಯಮಂತ್ರಿಗೇನು ಶಿಕ್ಷೆ? ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

# ರಾಷ್ಟ್ರಪತಿ ಕುರಿತು ಏಕವಚನ ಬಳಕೆಗೆ ಸಿಎಂ ವಿಷಾದ

ಬೆಂಗಳೂರು, ಜ. 28 – ಚಿತ್ರದುರ್ಗದಲ್ಲಿ ನಡೆದ ಸಮಾವೇಶದಲ್ಲಿ ಮಾತನಾಡುವಾಗ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಏಕವಚನದಿಂದ ಸಂಬೋಧಿಸಿದ್ದಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಷಾದಿಸಿದ್ದಾರೆ.

ಏಕವಚನ ಬಳಕೆಗಾಗಿ ಟೀಕೆಗಳು ಎದುರಾದ ನಂತರ ಪ್ರತಿಕ್ರಿಯೆ ನೀಡಿರುವ ಸಿದ್ದರಾಮಯ್ಯ, ದಲಿತ ಸಮುದಾಯಕ್ಕೆ ಸೇರಿದವರು ಎಂಬ ಕಾರಣಕ್ಕಾಗಿ ರಾಷ್ಟ್ರಪತಿಗಳಾಗಿರುವ ದ್ರೌಪದಿ ಮುರ್ಮು ಅವರಿಗೆ ಸಂಸತ್ ಭವನ ಉದ್ಘಾಟನೆಗೆ ಆಹ್ವಾನ ನೀಡದೆ ಬಿಜೆಪಿ ನಾಯಕರು ಅವಮಾನಿಸಿರುವುದು ನನಗೆ ತೀವ್ರ ನೋವು ಉಂಟುಮಾಡಿದ್ದು ಮಾತ್ರವಲ್ಲ ನನ್ನಲ್ಲಿ ಆಕ್ರೋಶ ಹುಟ್ಟಿಸಿತ್ತು ಎಂದಿದ್ದಾರೆ.

ಶೋಷಿತರ ಜಾಗೃತಿ ಸಮಾವೇಶದಲ್ಲಿ ಸ್ವಲ್ಪ ಭಾವುಕನಾಗಿ ಈ ಆಕ್ರೋಶವನ್ನು ಹೊರಹಾಕುವ ಭರದಲ್ಲಿ ಬಾಯ್ತಪ್ಪಿನಿಂದ ರಾಷ್ಟ್ರಪತಿಗಳನ್ನು ಏಕವಚನದಲ್ಲಿ ಸಂಬೋಧಿಸಿದೆ ಎಂದಿದ್ದಾರೆ.

ಗ್ರಾಮೀಣ ಪ್ರದೇಶದಿಂದ ಬಂದ ನನ್ನಂತಹವರು ಅಪ್ಪ-ಅಮ್ಮ ಸೇರಿದಂತೆ ಹಿರಿಯರನ್ನು ಕೂಡಾ ಏಕವಚನದಲ್ಲಿ ಸಂಬೋಧಿಸುವುದು ರೂಢಿ. ರಾಷ್ಟ್ರಪತಿಗಳು ನನ್ನಂತೆಯೇ ಶೋಷಿತ ಸಮಾಜದಿಂದ ಬಂದವರು, ಅವರ ಬಗ್ಗೆ ಅಪಾರ ಗೌರವವಿದೆ. ಅವರನ್ನು ಏಕವಚನದಲ್ಲಿ ಸಂಬೋಧಿಸಬಾರದಿತ್ತು.

ಅಚಾತುರ್ಯದಿಂದ ಆಗಿರುವ ಈ ಪ್ರಮಾದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

# ಇಂದು ವಿದ್ಯಾನಿಕೇತನ ಶಾಲಾ ವಾರ್ಷಿಕೋತ್ಸವ

ದಾವಣಗೆರೆ : ವಿದ್ಯಾನಿಕೇತನ ವಿದ್ಯಾಸಂಸ್ಥೆಯ ವಿದ್ಯಾನಿಕೇತನ ಆಂಗ್ಲ ಮಾಧ್ಯಮ ಪಬ್ಲಿಕ್ ಸ್ಕೂಲ್‌ನಲ್ಲಿ ಶಾಲಾ ವಾರ್ಷಿಕೋತ್ಸವ ಸಮಾರಂಭ-2024 ಕಾರ್ಯಕ್ರಮವನ್ನು ಇಂದು ಸಂಜೆ 5.45ಕ್ಕೆ ನಗರದ ವಿದ್ಯಾನಗರ ರಸ್ತೆಯಲ್ಲಿರುವ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ.

ಶ್ರೀ ಕ್ಷೇತ್ರ ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿರುವ ಈ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ ಅವರು ಉದ್ಘಾಟಿಸಲಿದ್ದಾರೆ.

ಅಧ್ಯಕ್ಷತೆ : ಪದವಿಪೂರ್ವ ಶಿಕ್ಷಣ ಇಲಾಖೆಯ ವಿಶ್ರಾಂತ ಉಪನಿರ್ದೇಶಕರು ಹಾಗೂ ವಿದ್ಯಾನಿಕೇತನ ವಿದ್ಯಾಸಂಸ್ಥೆಯ ಸಂಸ್ಥಾಪಕರು ಆದ ರುದ್ರಮುನಿ ವಹಿಸುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್, ವಿದ್ಯಾನಿಕೇತನ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಆರ್. ಮಂಜುನಾಥ ಹೆಗಡೆ , ಪದವಿಪೂರ್ವ ಶಿಕ್ಷಣ ಇಲಾಖೆಯ ವಿಶ್ರಾಂತ ಪ್ರಾಂಶುಪಾಲರು ಹಾಗೂ ವಿದ್ಯಾನಿಕೇತನ ಪಬ್ಲಿಕ್ ಸ್ಕೂಲ್ ಆಡಳಿತಾಧಿಕಾರಿಗಳಾದ ಕೆ.ಬಿ. ಆನಂದ್ ಆಗಮಿಸುವರು ಎಂದು ಪ್ರಾಥಮಿಕ ಶಾಲಾ ವಿಭಾಗದ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಶಕುಂತಲಾ ಜಿ., ಪ್ರೌಢಶಾಲಾ ವಿಭಾಗದ ಮುಖ್ಯೋಪಾಧ್ಯಾಯ ಬಿ.ಸಿ. ರೇಣುಕಾರಾಧ್ಯ ತಿಳಿಸಿದ್ದಾರೆ.

# ಸೇಂಟ್ ಜಾನ್ಸ್ ಶಾಲೆಯಲ್ಲಿ ಅಭಿನಂದನೆ ಹಾಗೂ ಬೀಳ್ಕೊಡುಗೆ ಕಾರ್ಯಕ್ರಮ




ದಾವಣಗೆರೆ, ಜ. 28- ನಗರದ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ 10ನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿ ಗಳಿಸಿದ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮ, ಪ್ರಸಕ್ತ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಫಾಸ್ಟರ್ ರೂಬಿ ನಿರ್ಮಲಾ ಟ್ರುತ್ವೇ ಫೆಲೋಶಿಪ್ ಚರ್ಚ್ ಇವರು ಪ್ರತಿಜ್ಞಾ ವಿಧಿ ಬೋಧಿಸಿದರು. ವಿಜಯಕುಮಾರ್ ಎಂ. ಸಂತೋಷ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಡಾ. ಹೆಚ್.ವಿ. ವಾಮದೇವಪ್ಪ ಉಪಸ್ಥಿತರಿದ್ದು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

10ನೇ ತರಗತಿಯ ರಾಜ್ಯ ಪಠ್ಯಕ್ರಮ ವಿಭಾಗದಿಂದ ರುಚಿತಾ ಸಿ.ಎಂ. ಹಾಗೂ ಕೇಂದ್ರ ಪಠ್ಯಕ್ರಮ ವಿಭಾಗದಿಂದ ಭೂಮಿಕಾ ಎಲ್. ಅವರಿಗೆ ಹುಲ್ಲುಮನೆ ರಾಮಪ್ಪ ಭೀಮಪ್ಪ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಹೆಚ್. ಅನಿಲ್‌ಕುಮಾರ್, ಟಿ.ಎಂ. ಉಮಾಪತಯ್ಯ, ಖಜಾಂಚಿ ಪ್ರವೀಣ್ ಹುಲ್ಲುಮನೆ, ಸೈಯದ್ ಆರಿಫ್ ಆರ್., ಶ್ರೀಮತಿ ಪ್ರೀತಾ ಟಿ. ರೈ, ನೇತ್ರಾವತಿ ಎಸ್.ಎಂ. ಉಪಸ್ಥಿತರಿದ್ದರು.

# ಲಿಟ್ಲ್ ಚಾಂಪ್ಸ್ ಶಾಲೆಯಲ್ಲಿ ಗಣರಾಜ್ಯೋತ್ಸವ



ದಾವಣಗೆರೆ, ಜ. 28- ಡಿಸಿಎಂ ಟೌನ್ ಶಿಪ್‌ನಲ್ಲಿರುವ ಲಿಟ್ಲ್ ಚಾಂಪ್ಸ್ ಶಾಲೆಯಲ್ಲಿ ಗಣರಾಜ್ಯೋತ್ಸವದ ಧ್ವಜಾರೋಹಣವನ್ನು ಸಂಸ್ಥೆಯ ಅಧ್ಯಕ್ಷ ಹಾಗೂ ವಿಜಯ ಲಾರಿ ಟ್ರಾನ್ಸ್‌ಪೋರ್ಟ್‌ನ ಮಾಲೀಕ ಕಿರಣ್ ಕುಮಾರ್ ಮತ್ತು ಸಂಸ್ಥೆಯ ನಿರ್ದೇಶಕರಾದ ಸಹನ ವಿಜಯಕುಮಾರ್ ನೆರವೇರಿಸಿದರು.

ಕಿರಣ್‌ಕುಮಾರ್ ಮಾತನಾಡಿ, ಮಕ್ಕಳು ದೇಶದ ಬಗ್ಗೆ ಅಭಿಮಾನ, ಗೌರವ ಹೊಂದಬೇಕು ಹಾಗೂ ಮುಂದೆ ನಮ್ಮ ದೇಶದ ಸತ್ಪ್ರಜೆಗಳಾಗಿ ಮೂಲಭೂತ ಹಕ್ಕುಗಳಿಂದ ಯಾರೊಬ್ಬರೂ ವಂಚಿತರಾಗದಂತೆ ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕಿಯರಾದ ನಾಗವೇಣಿ, ವಿಜಯಲಕ್ಷ್ಮಿ, ಕಾವ್ಯ, ಶೋಭಾ ಹುಲ್ಲುಮನಿ, ಆಶಾ, ಗಂಗಾ, ಲಾವಣ್ಯ, ಭಾಗ್ಯಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು.

# ಮಂಡ್ಯದಲ್ಲಿ ಹನುಮ ಧ್ವಜ ವಿವಾದ

**(1ನೇ ಪುಟದಿಂದ)** ಇದೆಲ್ಲವೂ ಬಿಜೆಪಿ ಹಾಗೂ ಸಂಘ ಪರಿವಾರದ ಪೂರ್ವನಿಯೋಜಿತ ಕೃತ್ಯ. ಬಿಜೆಪಿ ನಾಯಕರು ಮಂಡ್ಯದಲ್ಲಿ ಕೋಮುಗಲಭೆ ಎಬ್ಬಿಸುವ ಸಂಚು ನಡೆಸಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಬಗ್ಗೆ ಮಾತನಾಡಿರುವ ಮಂಡ್ಯ ಉಸ್ತುವಾರಿ ಸಚಿವ ಎನ್. ಚೆಲುವಾರಯಸ್ವಾಮಿ, ಈ ಧ್ವಜಸ್ತಂಭವು ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ. ನಾಳೆ ಅವರು ಜಿಲ್ಲಾಧಿಕಾರಿ ಕಚೇರಿ ಮುಂದೂ ಕೇಸರಿ ಧ್ವಜ ಹಾರಿಸುತ್ತೇನೆ ಎನ್ನಬಹುದು. ಇದಕ್ಕೆ ಅವಕಾಶ ನೀಡಲಾಗದು ಎಂದು ಹೇಳಿದ್ದಾರೆ.

ಸರ್ಕಾರದ ಕ್ರಮವನ್ನು ಟೀಕಿಸಿರುವ ಪ್ರತಿಪಕ್ಷದ ನಾಯಕ ಆರ್. ಅಶೋಕ್, ಗ್ರಾಮ ಪಂಚಾಯ್ತಿ ಒಪ್ಪಿಗೆ ಪಡೆದೇ ಹನುಮ ಧ್ವಜ ಹಾರಿಸಲಾಗಿತ್ತು. ಕಾಂಗ್ರೆಸ್ ಸರ್ಕಾರ ಹಠಾತ್ತನೆ ಅದನ್ನು ತೆರವುಗೊಳಿಸಿದೆ ಎಂದು ಆರೋಪಿಸಿದ್ದಾರೆ.

ಹನುಮಧ್ವಜ ಹಾರಿಸಲು ಗ್ರಾಮ ಪಂಚಾಯ್ತಿಯವರು ಸರ್ವಸಮ್ಮತಿಯಿಂದ ನಿರ್ಧರಿಸಿದ್ದರು. ಆದರೆ, ಸರ್ಕಾರ ದಮನಕಾರಿಯಾಗಿ ವರ್ತಿಸಿ, ಧ್ವಜ ಇಳಿಸಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದ್ದಾರೆ.

# ಭೋವಿ ಗುರುಪೀಠಕ್ಕೆ ಸಿಎಂ ಸಿದ್ದರಾಮಯ್ಯ ಭೇಟಿ



ಚಿತ್ರದುರ್ಗ, ಜ.28- ನಗರದ ಹೊರ ವಲಯದಲ್ಲಿರುವ ಮಾದಾರ ಚೆನ್ನಯ್ಯ ಗುರುಪೀಠದ ಬಳಿ ಭಾನುವಾರ ಹಮ್ಮಿಕೊಂಡಿದ್ದ ಶೋಷಿತ ಜನರ ಸಮಾವೇಶದಲ್ಲಿ ಪಾಲ್ಗೊಂಡ ನಂತರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭೋವಿ ಗುರುಪೀಠಕ್ಕೆ ಭೇಟಿ ನೀಡಿ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಶ್ರೀಗಳ ಆಶೀರ್ವಾದ ಪಡೆದರು.

ಈ ವೇಳೆ ಹಾಜರಿದ್ದ ಹಿಂದುಳಿದ, ದಲಿತ ಮಠಾಧೀಶರು ಕಾಂತರಾಜ ವರದಿಯನ್ನು ಒಪ್ಪಿಕೊಂಡು ಅನುಷ್ಠಾನಗೊಳಿಸುವಂತೆ ಸಿಎಂ ಸಿದ್ದರಾಮಯ್ಯ ಅವರಿಗೆ ಮತ್ತೊಮ್ಮೆ ಹಕ್ಕೊತ್ತಾಯ ಮಾಡಿದರು. ನಂತರ ಸಿದ್ದರಾಮಯ್ಯ ಅವರು ಮಂಜರಿ ಹನುಮಂತಪ್ಪ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಎಸ್‌ಜೆಎಸ್ ಸಮೂಹ ವಿದ್ಯಾಸಂಸ್ಥೆಗಳ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಶುಭ ಕೋರಿದರು.

# ಮಲೇಬೆನ್ನೂರಿಗೆ ಇಂದು ಸಂವಿಧಾನ ಜಾಗೃತಿ ಜಾಥಾ

75 ನೇ ಗಣರಾಜ್ಯೋತ್ಸವದ ಅಂಗವಾಗಿ ಜಿಲ್ಲಾಡಳಿತ ಹಮ್ಮಿಕೊಂಡಿರುವ ಸಂವಿಧಾನ ಜಾಗೃತಿ ಜಾಥಾವು ಇಂದು 11 ಗಂಟೆಗೆ ಮಲೇಬೆನ್ನೂರು ಪಟ್ಟಣಕ್ಕೆ ಆಗಮಿಸುತ್ತಿದ್ದು, ಜಾಗೃತಿ ಜಾಥಾ ವಾಹನವನ್ನು ಅದ್ಧೂರಿಯಾಗಿ ಸ್ವಾಗತಿಸಲು ಪಟ್ಟಣದ ಜನತೆ ಪುರಸಭೆ ಸದಸ್ಯರು ವಿದ್ಯಾರ್ಥಿಗಳು, ಶಿಕ್ಷಕರು ವಿವಿಧ ಇಲಾಖೆಗಳ ಅಧಿಕಾರಿಗಳು ಆಗಮಿಸುವಂತೆ ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್, ಉಪ ತಹಸೀಲ್ದಾರ್ ಆರ್ ರವಿ ತಿಳಿಸಿದ್ದಾರೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ಯುವಕರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 28. ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ, ಪಿಯುಸಿ ಪಾಸ್ / ಫೇಲ್. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಆಂಜನೇಯ ಬಡಾವಣೆ, ನೇತ್ರಾವತಿ ಹಾಸ್ಟೆಲ್ ರೋಡ್, ದಾವಣಗೆರೆ.
Mob : 93804 69079

**ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಕಟ್ಟುವಂತಹ ಸೈಟುಗಳು ಮಾರಾಟಕ್ಕಿವೆ**
90x83 Corner, 90x100 ಮೂರು ಕಡೆ ರೋಡ್ ಇದೆ, 83x62 West, 150x62 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬಾಡಿಗೆ ಬರುವಂತಹ ಮಳಿಗೆಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ, ಸಿತಾರಾ ಬಾರ್ ಹಿಂಭಾಗ 20x20 ಮಳಿಗೆ East, 30x30 ಮಳಿಗೆ East
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆ ಹತ್ತಿರ ಪೋದಾರ್ ಸ್ಕೂಲ್ ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ ಒಂದು ಅಡಿಗೆ 3,200 ರೂ.ಗಳಲ್ಲೂ ಲಭ್ಯ. 30x35 ಪಶ್ಚಿಮ-ಉತ್ತರ ಕಾರ್ನರ್ 60 ಅಡಿ ರಸ್ತೆಗೆ, 30x50 ಉತ್ತರ-ಪೂರ್ವ ಕಾರ್ನರ್ 60 ಅಡಿ ರಸ್ತೆಗೆ, 30x40 ದಕ್ಷಿಣ, 30x40 ಪಶ್ಚಿಮ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೋರ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು
ಸಂಪರ್ಕಿಸಿ :
86609 98651
97436 54365

**ಕರ್ನಾಟಕ ಗೃಹ ಮಂಡಲಿಯಲ್ಲಿ ಮನೆಗಳು, ಸೈಟುಗಳು ಮಾರಾಟಕ್ಕಿವೆ**
50x80 East, Rate Rs. 2800/- 30x50 East, 30x50 North, 30x50 West, 30x40 East, 30x40 North, 40x60 North
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸನ್ನಿಧಿ ಟ್ರೇಡಿಂಗ್ ಕೋ**
ದಾವಣಗೆರೆ ವಿಭಾಗಕ್ಕೆ ಬೇಕಾಗಿದ್ದಾರೆ. ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ಸ್, ಟೆಲಿಕಾಲರ್ಸ್, ಡ್ರೈವರ್ಸ್, ಡೆಲಿವರಿ ಬಾಯ್ಸ್. ಸಂಪರ್ಕಿಸಿ :
89045 80039, 89045 80030

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 30x50 ಉತ್ತರ, 30x50 ಪಶ್ಚಿಮ, 40x60 ಉತ್ತರ, 120 ಅಡಿ ರಸ್ತೆಗೆ ಹೊಂದಿಕೊಂಡು 40x60 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್‌ನಲ್ಲಿ 50x50 (ಉತ್ತರ-ಪಶ್ಚಿಮ ಕಾರ್ನರ್) 30x50 (ಪಶ್ಚಿಮ) ಆಂಜನೇಯ ಬಡಾವಣೆ 30x40 ಉತ್ತರ, ಸರಸ್ವತಿ ಬಡಾವಣೆ 45x50 (ಕಾರ್ನರ್) KHB 30x40 ಪೂರ್ವ 30x50 ಉತ್ತರ
95385 65909

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**ನಾಟಿ ಕೋಳಿ ದೊರೆಯುತ್ತದೆ**
ಬೇಕಾದಲ್ಲಿ ಸಂಪರ್ಕಿಸಿ :
ಮೊ. 83105-91159

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಟ್ಯೂಶನ್ ಮಾಡಲಾಗುವುದು**
ಸ್ಟೇಟ್ ಸಿಲಬಸ್ SSLC ಯಲ್ಲಿ ಗಣಿತ, ಸಮಾಜ ಮತ್ತು ವಿಜ್ಞಾನ ವಿಷಯದಲ್ಲಿ ಫೇಲ್ ಆಗಿದ್ದರೆ ಅಂತಹವರಿಗೆ ಟ್ಯೂಶನ್ ಮಾಡಲಾಗುವುದು. ಸಂಪರ್ಕಿಸಿ:
79756 11123

**ಮನೆ ಲೀಸ್‌ಗೆ ಇದೆ**
ಮೊದಲನೇ ಮಹಡಿಯಲ್ಲಿ ಬೋರ್ ವೆಲ್ / ಮುನ್ಸಿಪಲ್ ನೀರಿನ ಸೌಲಭ್ಯ ಇರುವ 3BHK ಮನೆ ಲೀಸ್‌ಗೆ ಇದೆ. #1299/49 BJM ಸ್ಕೂಲ್ ಹಿಂಭಾಗ, ವಿಜಯ ನಗರ ಬಡಾವಣೆ, ಕೊಂಡಜ್ಜಿ ರಸ್ತೆ, ದಾವಣಗೆರೆ.
78924 85581, 74064 14528

**Bruit Academy**
IIT FOUNDATION (JEE)
FROM 5th Std to 10th Std
( CBSE, ICSE, IGCSE)
NIJALINGAPPA BADAVANE
96201 53806

**ಮನೆ ಲೀಸ್‌ಗೆ ಇದೆ**
'ಬಿ' ಬ್ಲಾಕ್, 4ನೇ ಮೇನ್ ರಸ್ತೆ, S.S. ಬಡಾವಣೆಯಲ್ಲಿ ಮೊದಲನೇ ಮಹಡಿಯಲ್ಲಿ ಡಬ್ಬಲ್ ಬೆಡ್ ರೂಂ ಇರುವ ಹಾಗು ಬಾಲ್ಕನಿ, ಅಟ್ಯಾಚ್ ಬಾತ್ ಮನೆ ಲೀಸ್‌ಗೆ ಇದೆ. ವಿಚಾರಿಸಿ:
97425 37448


**2 BHK FLAT FOR SALE**
1250 Sq. ft., 2 Balconies. 2nd Floor, Lift and Power-back Present.
Location : Shankuntala Park View, MCC 'B' Block, 7th Main, Davanagere.
CONTACT- WhatsApp only to
+91- 9742521922

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಕಮರ್ಷಿಯಲ್ ಜಾಗ ಬಾಡಿಗೆಗೆ ಇದೆ**
HKR ಸರ್ಕಲ್‌ನಲ್ಲಿ 1ನೇ ಮಹಡಿ, 30x50 ಅಡಿ ಬ್ಯಾಂಕ್/ಕೋಚಿಂಗ್ ಕ್ಲಾಸ್/ಪಾಲಿ ಕ್ಲಿನಿಕ್/ಇತರೆ ಆಫೀಸ್‌ಗಳಿಗೆ ಬಾಡಿಗೆ ದೊರೆಯುತ್ತದೆ.
98445 28188

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ನಾಕ್ ತೆಗೆಯಲು ಬೇಕಾಗಿದ್ದಾರೆ. ಭೇಟಿ ಸಮಯ ಸಂಜೆ 6:30ರ ನಂತರ
ಶ್ರೀ ಗುರು ಎಂಟರ್ ಪ್ರೈಸಸ್
#579, 6ನೇ ಮುಖ್ಯ ರಸ್ತೆ ಪಿ.ಜೆ. ಬಡಾವಣೆ ದಾವಣಗೆರೆ.

**ರಕ್ತದಾನ - ಮಹಾದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸುಸಜ್ಜಿತವಾದ ಕ್ಲಿನಿಕ್ ಬಾಡಿಗೆಗಿದೆ**
ಸ್ವಾಗೇರ್‌ಪೇಟೆ ಕಾಯಿಪೇಟೆ, ಬಸವೇಶ್ವರ ದೇವಸ್ಥಾನ, ಹಳೆ ದಾವಣಗೆರೆ ಹತ್ತಿರ, 2 ಕೊಠಡಿ (ಕ್ಯಾಬಿನ್) ವುಳ್ಳ ಮಳಿಗೆ ಕ್ಲಿನಿಕ್/ಆಫೀಸ್ ಕೊಡುವುದಿದೆ ಅಥವಾ ಕ್ಲಿನಿಕ್‌ನ ಎಲ್ಲಾ ಸಾಮಗ್ರಿಗಳು ಮಾರಾಟಕ್ಕಿವೆ.
98867 06400

**ನೇರ ಪರೀಕ್ಷೆಗಳು**
SSLC , PUC
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
BA, B.Com, MA, M.Com, MBA (ALL),
ಶ್ರೀ ಗಂಗೋತ್ರಿ ಕರಸ್ಪಾಂಡೆನ್ಸ್ ಕಾಲೇಜ್
ಮೋತಿ ಸ್ಟ್ರೀಟ್ಸ್/ ಟ್ರೆಂಡ್ಸ್ ಪಕ್ಕ, ಪಿ.ಬಿ. ರಸ್ತೆ, ದಾವಣಗೆರೆ
86602 35013

**2 ಬೆಡ್ ರೂಂ ಮನೆ ಬಾಡಿಗೆಗೆ**
ಡೋ.ನಂ. 240/2, 4ನೇ ಮೇನ್, ಪಿ.ಜೆ. ಬಡಾವಣೆ, ನರ್ಸರಿ ಜೈನ್ ವಿದ್ಯಾಲಯದ ಹತ್ತಿರ, ರಾಂ ಅಂಡ್ ಕೋ ಸರ್ಕಲ್ ಬಳಿ 2 ಬೆಡ್ ರೂಂನ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
93809 21540, 89719 49707

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ :
90082 28222, 99001 42052

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸಮಾಡಲು ಹುಡುಗಿಯರು ಬೇಕಾಗಿರುತ್ತಾರೆ, ವಯಸ್ಸು 18-35,
ಡಿಗ್‌ಜಾಮ್ ಲೇಡಿಸ್ ವೇರ್
ವಿಜಯಲಕ್ಷ್ಮಿ ರಸ್ತೆ, ಗಡಿಯಾರ ಕಂಬದ ಹತ್ತಿರ, ದಾವಣಗೆರೆ.
89518 96908

**ಬೇಕಾಗಿದ್ದಾರೆ**
ಮನೆ ಕೆಲಸ ಮತ್ತು ಮಗುವಿನ ಆರೈಕೆ ಮಾಡುವ ಕೆಲಸಕ್ಕೆ ಸ್ತ್ರೀಯರು ಬೇಕಾಗಿದ್ದಾರೆ. ಸಂಪರ್ಕಿಸಿ :
91642 56425
99865 99923

**24X7 CAR TAXI**
ಕಾರ್ ಬಾಡಿಗೆಗೆ
ಸಂಪರ್ಕಿಸಿ :
86609 98651
97436 54365

**WANTED**
Girls required for billing work at Food Mart Supermarket.
Quli : PUC Any Degree. Contact :
98864 63531

**Tele Caller (Ladies) & Business Development Manager**
(Attractive Salary + incentives)
99645 46667, 89700 66666

**3 BHK HOUSE TO-LET**
Suitable for Office also BIET main Road, Opposite Vasanta Benne Dose Hotel, Davangere.
91642 12306

**ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ**
ಹೆಣ್ಣು ಮಕ್ಕಳು ಅಥವಾ ಗಂಡು ಮಕ್ಕಳು ಯಾರಾದರೂ ಸಹ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ನಂಬರ್‌ಗೆ ಸಂಪರ್ಕಿಸಿ :
99014 18510

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**WANTED**
Taking stocks (married ladies) preferred -1 PUC Order Booking - PUC -2, Delivery Boys
Contact along with Bio Data
AK TRADERS
Bapuji Hospital Road PJ. Extension, Davangere

**Property Doctor / ಪ್ರಾಪರ್ಟಿ ಡಾಕ್ಟರ್**
(All Works under One Roof)
EC, E-Swathu, Building Licence, Khatha Change, Property Registration, Loan-SBI, Canara + 40 Banks
96325 54524

## ಕೊಟ್ಟೂರು ಜಾತ್ರೆ: ಮಾ.1 ರಿಂದ ಪಾದಯಾತ್ರೆ



ದಾವಣಗೆರೆ, ಜ. 28 - ಮಾರ್ಚ್ 4ರ ಸೋಮವಾರ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವದ ಪ್ರಯುಕ್ತ ಮಾರ್ಚ್ 1ರ ಶುಕ್ರವಾರ ಸಂಜೆಯಿಂದ ಭಕ್ತರು ಪಾದಯಾತ್ರೆ ಹೊರಡಲಿದ್ದಾರೆ. ಅರಸೀಕೆರೆ ಶ್ರೀ ಗುರು ಕೋಲಶಾಂತೇಶ್ವರ ವಿರಕ್ತ ಮಠದಲ್ಲಿ ಪಾದಯಾತ್ರಿಗಳಿಗೆ ಪ್ರಸಾದ ದಾಸೋಹ ಸೇವೆ ಮಾಡುವ ಭಕ್ತರು, ದಾನಿಗಳು ದೇವಸ್ಥಾನ ಸಮಿತಿಯ ಕಣಕುಪ್ಪಿ ಮುರುಗೇಶಪ್ಪ (96118 89151) ಟಿ.ಜಿ. ಬಕ್ಕೇಶಪ್ಪ (91089 88898) ಬಿ. ಚಿದಾನಂದಪ್ಪ (98445 28449) ಮಲ್ಲಾಬಾದಿ ಗುರುಬಸವರಾಜ್ (79757 97079) ಅವರನ್ನು ಸಂಪರ್ಕಿಸಬಹುದು. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಲು ಕೋರಿದೆ.

## ಭರವಸೆ ನೀಡಿದ್ದ ಭದ್ರಾ ಮೇಲ್ದಂಡೆ ಯೋಜನೆ ಹಣ ಬಿಡುಗಡೆಯಾಗಲಿ : ಚಂದ್ರಪ್ಪ

ದಾವಣಗೆರೆ, ಜ.28- ಮಧ್ಯ ಕರ್ನಾಟಕದ ಬಯಲು ಸೀಮೆ ಪ್ರದೇಶಗಳಿಗೆ ನೀರೊದಗಿಸುವ ರಾಜ್ಯ ಸರ್ಕಾರದ ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದ ನಂತರ ರಾಷ್ಟ್ರೀಯ ಯೋಜನೆ ಎಂದು ಘೋಷಿಣೆ ಮಾಡಿ 5,300 ಕೋಟಿ ಹಣ ಒದಗಿಸುವುದಾಗಿ ಕೇಂದ್ರ ಸರ್ಕಾರ ಭರವಸೆ ನೀಡಿತ್ತು. ಆದರೆ, ಇಲ್ಲಿಯವರೆಗೂ ಯಾವುದೇ ಹಣ ಬಿಡುಗಡೆಯಾಗಿಲ್ಲ. ಈ ಯೋಜನೆಗೆ ಕೇಂದ್ರ ಸರ್ಕಾರ ತಕ್ಷಣವೇ ಅನುದಾನ ಬಿಡುಗಡೆ ಮಾಡುವಂತೆ ಕೆಪಿಸಿಸಿ ಕಾರ್ಯಾಧ್ಯಕ್ಷ ಬಿ. ಎನ್. ಚಂದ್ರಪ್ಪ ಕೇಂದ್ರ ಸರ್ಕಾರಕ್ಕೆ ಒತ್ತಾಯಿಸಿದರು.

ಚಿತ್ರದುರ್ಗ, ದಾವಣಗೆರೆ, ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳು ಭದ್ರಾ ಯೋಜನೆಯ ಅನುಕೂಲ ಪಡೆಯಲಿವೆ. ನಾಲ್ಕು ಜಿಲ್ಲೆ, 12 ತಾಲ್ಲೂಕುಗಳ, 367 ಕೆರೆ ತುಂಬಿಸುವ ಯೋಜನೆ ಇದಾಗಿದೆ.

# ಪ್ರಧಾನಿ ಮೋದಿ ಅನ್ನ-ಸೂರು ಸಿಗದ ಜನರ ಕ್ಷಮೆ ಕೇಳಲಿ



### ಪ್ರೊ. ಕೃಷ್ಣಪ್ಪ ಭವನದಲ್ಲಿ ಸಾಣೇಹಳ್ಳಿ ಶ್ರೀ ಅಭಿಪ್ರಾಯ

ಮಲೇಬೆನ್ನೂರು, ಜ.28- ಪ್ರಧಾನಿ ನರೇಂದ್ರ ಮೋದಿ ಅವರು ಕ್ಷಮಿಸು ಎಂದು ಕೇಳಬೇಕಾಗಿರುವುದು ಶ್ರೀರಾಮನನ್ನಲ್ಲ, ದೇಶದಲ್ಲಿ ಸ್ವಂತ ಸೂರು, ಎರಡೊತ್ತು ಊಟ ಇಲ್ಲದೇ ಅಲೆಮಾರಿಗಳಾಗಿರುವ ಜನರನ್ನು ಕ್ಷಮೆ ಕೇಳಬೇಕೆಂದು ಸಾಣೇಹಳ್ಳಿ ಮಠದ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ಶುಕ್ರವಾರ ಸಂಜೆ ಹನಗವಾಡಿ ಸಮೀಪ ಇರುವ ಪ್ರೊ. ಬಿ.ಕೃಷ್ಣಪ್ಪ ಭವನದಲ್ಲಿ ಮಾನವ ಬಂಧುತ್ವ ವೇದಿಕೆ ಮತ್ತು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ 2 ದಿನಗಳ ಕೌಶಲ್ಯ ತರಬೇತಿ ಕಾರ್ಯಾಗಾರದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ನಮ್ಮ ಈ ಮಾತು ಬಿಜೆಪಿಗೆ ಅಥವಾ ಮೋದಿ ಅವರಿಗೆ ಟೀಕೆ ಮಾಡುವುದಲ್ಲ, ನಾವು ಯಾವುದೇ ವಿಷಯದಲ್ಲಿ ಸತ್ಯ ಹೇಳಿದರೆ, ಅದು ಕೆಲವರಿಗೆ ಇಷ್ಟ ಆಗಲ್ಲ. ಸತ್ಯ ಹೇಳುವವರಿಗೆ ಸಮಾಜ ಘಾತುಕರೆಂಬ ಹಣೆಪಟ್ಟಿ ಹಚ್ಚುವ ಸಿಮೀತ ಬುದ್ಧಿಯ ಜನರಿದ್ದಾರೆ.

ನಾವು ಇತ್ತೀಚೆಗೆ ಗಣಪತಿ ಪೂಜೆ ನಮ್ಮ ಸಂಸ್ಕೃತಿ ಅಲ್ಲ ಎಂದು ಹೇಳಿದ್ದನ್ನೂ ಸರಿಯಾಗಿ ಅರ್ಥ ಮಾಡಿಕೊಳ್ಳದೇ ವಿರೋಧ ವ್ಯಕ್ತಪಡಿಸಿದರು. ಇನ್ನೂ ಕೆಲವರು ನಮ್ಮನ್ನು ಶಿವನನ್ನು ಪೂಜಿಸುವ ನೀವು ಗಣಪತಿಯನ್ನು ಏಕೆ ಒಪ್ಪುವುದಿಲ್ಲ ಎಂದು ಪ್ರಶ್ನಿಸಿದರು. ಅದಕ್ಕೆ ನಾವು ನಮ್ಮ ಶಿವ ಸರ್ವಜ್ಞ ಎಂಬ ಉತ್ತರ ಕೊಟ್ಟಿದ್ದೇವೆ.

ಅನ್ಯಾಯ, ದ್ರೋಹ, ಮೋಸ ಕಂಡಾಗ ತೆರೆ ಎತ್ತಿ ಖಂಡಿಸಬೇಕು. ಎಲ್ಲಾ ರೀತಿಯ ಮೌಢ್ಯಗಳಿಂದ ಜನರು ಹೊರ ಬಂದು ವೈಜ್ಞಾನಿಕತೆ, ವೈಚಾರಿಕತೆಯನ್ನು ಮೈಗೂಡಿಸಿಕೊಳ್ಳಬೇಕು. ಯಜ್ಞ-ಯಾಗಾದಿಗಳನ್ನು ನಿಲ್ಲಿಸಿ, ನಮ್ಮ ಆಚಾರ-ವಿಚಾರಗಳನ್ನು ನಾವೇ ತಿದ್ದಿಕೊಳ್ಳಬೇಕು. ಕಷ್ಟಪಟ್ಟು ನಾವು ಮನೆ ಕಟ್ಟಿ ಇನ್ನೊಬ್ಬರನ್ನು ದುಡ್ಡ ಕೊಟ್ಟು ಕರೆಸಿ ಹೊಗೆ ಹಾಕಿಸಿಕೊಳ್ಳಬೇಡಿ ಎಂದು ಸಾಣೇಹಳ್ಳಿ ಸ್ವಾಮೀಜಿ ಎಚ್ಚರಿಸಿದರು.

ಸತೀಶ್ ಜಾರಕಿಹೊಳಿ ಅವರೂ ಸ್ಮಶಾನದಲ್ಲಿ ಕಾರ್ಯಕ್ರಮ ಮಾಡುವ ಜನರಿಗೆ ಸ್ಮಶಾನದ ಬಗ್ಗೆ ಇರುವ ಭಯ ಹಾಗೂ ಮೂಢನಂಬಿಕೆ ದೂರ ಮಾಡಿದ್ದಾರೆ. ಅಷ್ಟೇ ಅಲ್ಲದೇ, ರಾಜ್ಯದಲ್ಲಿ ಮಾನವ ಬಂಧುತ್ವ ವೇದಿಕೆ ಮೂಲಕ ಇಂತಹ ನೂರಾರು ಜಾಗೃತಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಮಾದರಿಯಾಗಿದ್ದಾರೆಂದು ಸಾಣೇಹಳ್ಳಿ ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ಪ್ರೊ. ಬಿ.ಕೃಷ್ಣಪ್ಪನವರ ಈ ಸಾಂಸ್ಕೃತಿಕ ಭವನದಲ್ಲಿ ವೈಚಾರಿಕ ಕಾರ್ಯಕ್ರಮಗಳು ಮತ್ತು ವಿದ್ಯಾರ್ಥಿಗಳಿಗೆ ವಿವಿಧ ತರಬೇತಿ ನೀಡಿ, ಅವರ ಬದುಕನ್ನು ಭದ್ರಗೊಳಿಸುವ ಮೂಲಕ ಅವರ ಆಶಯಗಳನ್ನು ಸಾಕಾರಗೊಳಿಸಲಾಗುತ್ತಿದೆ. ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಕರೆದರೆ ಸಾಲದು, ಅವರ ಆದರ್ಶಗಳನ್ನು ಬಿತ್ತುವ ಅಕಾಡೆಮಿ ರಚನೆ ಆಗಬೇಕು. ಜೊತೆಗೆ ಹುಲಿಕಲ್ ನಟರಾಜ್ ಅವರ ಆಶಯದಂತೆ ರಾಜ್ಯದಲ್ಲಿ ವೈಜ್ಞಾನಿಕ ಅಕಾಡೆಮಿಯೂ ಜಾರಿಗೆ ತರುವ ಬಗ್ಗೆ ಸರ್ಕಾರದ ಗಮನ ಸೆಳೆಯುವುದಾಗಿ ಸಾಣೇಹಳ್ಳಿ ಸ್ವಾಮೀಜಿ ಹೇಳಿದರು.

ಕಾರ್ಯಾಗಾರವನ್ನು ಉದ್ಘಾಟಿಸಿದ ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿ, ತರ್ಕ-ವೈಚಾರಿಕತೆ ಇಲ್ಲದೇ ಸತ್ಯಾನ್ವೇಷಣೆ ಮಾಡಲು ಸಾಧ್ಯವಿಲ್ಲ. ನಮಗೆ ಪರಂಪರೆಬೇಕು. ಆದರೆ, ಅದರ ಹೆಸರಿನಲ್ಲಿಯೇ ಹಿಂದೆ ಉಳಿಯುವ ಕೆಲಸ ಆಗಬಾರದು. ಈ ನಿಟ್ಟಿನಲ್ಲಿಯೇ ಸತೀಶ್ ಜಾರಕಿಹೊಳಿ ಅವರು, ರಾಜ್ಯದ 9 ಕಡೆಗಳಲ್ಲಿ ಇಂತಹ ಅಧ್ಯಯನ ಕೇಂದ್ರಗಳನ್ನು ಮಾಡಿದ್ದಾರೆ ಎಂದರು.

ರಾಜ್ಯ ವೈಚಾರಿಕ ಸಂಶೋಧನಾ ಪರಿಷತ್ತಿನ ಅಧ್ಯಕ್ಷ ಹುಲಿಕಲ್ ನಟರಾಜ್ ಅಧ್ಯಕ್ಷತೆ ವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಮೌಢ್ಯ ಮುಕ್ತ ಸಮಾಜ ನಮ್ಮ ಗುರಿಯಾಗಿದ್ದು, ಇದಕ್ಕೆ ಎಲ್ಲರೂ ಕೈ ಜೋಡಿಸಿದಾಗ ಮಾತ್ರ ಬದಲಾವಣೆ ಸಾಧ್ಯ. ಅದಕ್ಕಾಗಿಯೇ ರಾಜ್ಯದಲ್ಲಿ ವೈಜ್ಞಾನಿಕ ಅಕಾಡೆಮಿ ಸ್ಥಾಪನೆ ಆಗಬೇಕೆಂಬುದು ನಮ್ಮ ಒತ್ತಾಯವಾಗಿದೆ ಎಂದರು.

ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಪದಾಧಿಕಾರಿಗಳು ಹಾಗೂ ರಾಜ್ಯದ ಎಲ್ಲಾ ಜಿಲ್ಲಾಧ್ಯಕ್ಷರು ಮತ್ತು ಹನಗವಾಡಿ ಗ್ರಾ.ಪಂ. ಅಧ್ಯಕ್ಷ ತಿಪ್ಪೇಶ್, ಬೆಳ್ಳೂಡಿ ರಾಮಚಂದ್ರಪ್ಪ, ಸಾಬೀರ್, ಉಕ್ಕಡಗಾತ್ರಿ ಮಂಜು, ಆರ್.ಧನರಾಜ್ ಮತ್ತಿತರರು ಭಾಗವಹಿಸಿದ್ದರು.

## ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಅಂಜಿನಪ್ಪ



ಹರಪನಹಳ್ಳಿ, ಜ.28- ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಇಲ್ಲಿಯ ಪುರಸಭೆಯ ಹಿರಿಯ ಸದಸ್ಯ ಎಂ.ವಿ.ಅಂಜಿನಪ್ಪ ಅವರನ್ನು ನೇಮಕ ಮಾಡಿ, ಕೆಪಿಸಿಸಿ ಅಧ್ಯಕ್ಷರು ಆದೇಶ ಹೊರಡಿಸಿದ್ದಾರೆ.

ಎಂ.ವಿ.ಅಂಜಿನಪ್ಪ ಅವರು 5 ಬಾರಿ ಪುರಸಭಾ ಸದಸ್ಯರಾಗಿ, 1 ಬಾರಿ ಅಧ್ಯಕ್ಷರಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ , ಎನ್‌ಎಸ್‌ಯುಐ ಹಾಗೂ ಯೂತ್ ಕಾಂಗ್ರೆಸ್ ಪಕ್ಷದ ಸಂಘಟನೆ ಹೀಗೆ 30 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತರಾಗಿ ದುಡಿದಿದ್ದರಿಂದ ಇದೀಗ ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ.

**ಚಿಗಟೇರಿ ಬ್ಲಾಕ್ ಕಾಂಗ್ರೆಸ್‌ಗೆ ಕುಬೇರಪ್ಪ ಅಧ್ಯಕ್ಷ :** ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮೈದೂರು ಗ್ರಾಮದ ಹಿರಿಯ ಕಾಂಗ್ರೆಸ್ ಮುಖಂಡ, ತಾ.ಪಂ. ಮಾಜಿ ಅಧ್ಯಕ್ಷ ಕುಬೇರಗೌಡ ಅವರನ್ನೂ ಸಹ ಕೆಪಿಸಿಸಿ ಅಧ್ಯಕ್ಷರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

## ಹದಡಿಯ ಕನಕ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷರಾಗಿ ನಾಗರಾಜ್ ಆಯ್ಕೆ



ದಾವಣಗೆರೆ, ಜ. 28- ಹದಡಿಯ ಕನಕ ವಿವಿಧೋದ್ದೇಶ ಸಹಕಾರ ಸಂಘದ 2024-29ನೇ ಸಾಲಿಗೆ ನೂತನ ಅಧ್ಯಕ್ಷರಾಗಿ ಎ.ಹೆಚ್. ನಾಗರಾಜ್ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ಎಂ.ಆರ್.ಇಂದಿರಾ ದಳವಾಯಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ದಿನಾಂಕ ಜನವರಿ 20 ರಂದು ನಿಗದಿಯಾಗಿದ್ದ ಚುನಾವಣೆಯಲ್ಲಿ ಅವಿರೋಧ ಆಯ್ಕೆ ನಡೆಯಿತು ಎಂದು ಚುನಾವಣಾಧಿಕಾರಿ ಜಿ.ಎಸ್. ಸುರೇಂದ್ರ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು, ಸರ್ವ ಸದಸ್ಯರು, ಕಾರ್ಯದರ್ಶಿ ಯೋಗೀಶ್ ಎಲ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಕ್ಯಾಂಪಸ್ ಟು ಕಾರ್ಪೊರೇಟ್ ಕಾರ್ಯಾಗಾರ



ದಾವಣಗೆರೆ, ಜ.28- ನಗರದ ಜಿಎಂ ತಾಂತ್ರಿಕ ಮಹಾವಿದ್ಯಾಲಯದ ಇನ್ಫಾರ್ಮೇಶನ್ ಸೈನ್ಸ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕ್ಯಾಂಪಸ್ ಟು ಕಾರ್ಪೊರೇಟ್ ಎಂಬ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಎಇಎಂ ಡೆವಲಪರ್ ಅಟ್ ಇನ್ಫೋಸಿಸ್ ಮೈಸೂರಿನ ಶ್ರೀ ಸುಷ್ಮೇಂದ್ರ ಎನ್. ರಾವ್ ಹಾಗೂ ಇನ್ಫಾರ್ಮೇಶನ್ ಸೈನ್ಸ್ ವಿಭಾಗದ ಮುಖ್ಯಸ್ಥ ಡಾ. ಟಿ. ಎಂ. ವೀರಗಂಗಾಧರ ಸ್ವಾಮಿ ಅವರು ವಿದ್ಯಾರ್ಥಿಗಳಿಗೆ ಕಾರ್ಪೊರೇಟ್ ಜಗತ್ತು ಮತ್ತು ಅಲ್ಲಿನ ಪರಿಸ್ಥಿತಿ ಬಗ್ಗೆ ಅರಿವು ಮೂಡಿಸಿದರು.

ತರಬೇತಿ ಮತ್ತು ಉದ್ಯೋಗ ವಿಭಾಗದ ನಿರ್ದೇಶಕ ಟಿ. ಆರ್. ತೇಜಸ್ವಿ ಕಟ್ಟಿಮನಿ ಮಾತನಾಡಿ, ಈ ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ಕಾರ್ಪೊರೇಟ್ ಜಗತ್ತಿನಲ್ಲಿ ಕೆಲಸ ಸಿಗುವುದು ತುಂಬಾ ಕಷ್ಟ, ಆದರೂ ಕಾಲೇಜಿನ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ಉದ್ಯೋಗಾವಕಾಶ ಕಲ್ಪಿಸುವುದಾಗಿ ಭರವಸೆ ಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಬಿ. ಸಂಜಯ್ ಪಾಂಡೆ ವಹಿಸಿದ್ದರು. ಸೌಮ್ಯ ಎತ್ತಿನಹಳ್ಳಿ, ಎಂ. ವಿ. ಪೂಜಾ ಹಾಗೂ ಇನ್ಫಾರ್ಮೇಶನ್ ಸೈನ್ಸ್ ವಿಭಾಗದ ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಪರಿಸರವನ್ನು ಉಳಿಸಿ, ಬೆಳೆಸುವ ಹೊಣೆಗಾರಿಕೆ ವಿದ್ಯಾರ್ಥಿಗಳ ಮೇಲಿದೆ : ಶಾಸಕ ಎಸ್ಸೆಸ್



ದಾವಣಗೆರೆ, ಜ.28- ದೇವರು ನೀಡಿರುವ ಪರಿಸರವನ್ನು ಉಳಿಸಿ, ಬೆಳೆಸಬೇಕಾದ ಹೊಣೆಗಾರಿಕೆ ಇಂದಿನ ವಿದ್ಯಾರ್ಥಿ ಸಮೂಹದ ಮೇಲಿದೆ ಎಂದು ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಹೇಳಿದರು.

ದಾವಣಗೆರೆ ತೋಟಗಾರಿಕೆ ಇಲಾಖೆ ವತಿಯಿಂದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ನಗರದ ದುರ್ಗಾಂಬಿಕಾ ಪ್ರೌಢಶಾಲೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ "ವಿದ್ಯಾರ್ಥಿಗಳಿಗೆ ತೋಟಗಾರಿಕೆ" ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಉತ್ತಮ ಪರಿಸರವನ್ನು ಹೊಂದುವುದು ಎಲ್ಲರ ಕರ್ತವ್ಯ, ತರಕಾರಿ ತೋಟ ನಿರ್ಮಾಣ ಕುರಿತು ಇಲಾಖೆ ಈ ರೀತಿಯ ಕಾರ್ಯಕ್ರಮ ಹಮ್ಮಿಕೊಂಡಿರುವುದು ಒಳ್ಳೆಯ ನಿರ್ಧಾರ. ಪರಿಸರ ರಕ್ಷಣೆಯಲ್ಲಿ ವಿದ್ಯಾರ್ಥಿ ಪಾತ್ರ ಬಹು ಮುಖ್ಯವಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿ ಡಾ. ಬಸವನಗೌಡ ಮಾತನಾಡಿ, ಶಾಲಾ ಆವರಣಗಳಲ್ಲಿ ತರಕಾರಿ ಕೈ ತೋಟಗಳನ್ನು ನಿರ್ಮಾಣ ಮಾಡುವ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ, ಅಲ್ಲಿ ಬೆಳೆಯುವ ಸಾವಯವ ತರಕಾರಿಗಳನ್ನು ಮಧ್ಯಾಹ್ನದ ಬಿಸಿಯೂಟಕ್ಕೆ ಬಳಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ತಾಲ್ಲೂಕು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ರೇಷ್ಮಾ ಪರ್ವಿನ್ ಮಾತನಾಡಿ, ಆಹಾರ ತಜ್ಞರ ಪ್ರಕಾರ ಪ್ರತಿಯೊಬ್ಬರೂ ತಮ್ಮ ವಯಸ್ಸಿಗೆ ಅನುಗುಣವಾಗಿ ಹಣ್ಣು ಮತ್ತು ತರಕಾರಿಗಳನ್ನು ಸೇವಿಸುವುದು ಅಗತ್ಯ, ವಿಷಮುಕ್ತ ಆಹಾರ ಸೇವನೆ ದೃಷ್ಟಿಯಿಂದ ರಾಜ್ಯ ಸರ್ಕಾರ ಈ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಸದಸ್ಯ ಚಮನ್ ಸಾಬ್, ಮಾಜಿ ಸದಸ್ಯರಾದ ದಿನೇಶ್ ಕೆ. ಶೆಟ್ಟಿ, ಚಂದ್ರಶೇಖರ್, ಗೌಡ್ರ ಚನ್ನಬಸಪ್ಪ ಹಾಗೂ ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

## ಹರಪನಹಳ್ಳಿ : ಎನ್‌ಎಸ್‌ಎಸ್ ಶಿಬಿರದ ಸಮಾರೋಪ



ಹರಪನಹಳ್ಳಿ, ಜ.28- ದೇಶದ ಪ್ರಗತಿಯಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಪಾತ್ರ ಬಹುಮುಖ್ಯವಾಗಿದೆ ಎಂದು ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ ಕಲ್ಮಠ ಹೇಳಿದರು.

ತಾಲ್ಲೂಕಿನ ಚಿರಸ್ಥಹಳ್ಳಿ ಗ್ರಾಮದಲ್ಲಿ ಎಡಿಬಿ ಪ್ರಥಮ ದರ್ಜೆ ಕಾಲೇಜಿನವರು ಆಯೋಜಿಸಿದ್ದ ಎನ್. ಎಸ್. ಎಸ್. ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಎನ್.ಎಸ್.ಎಸ್. ಸ್ವಾತಂತ್ರ್ಯ ಪೂರ್ವದಲ್ಲಿ ಆರಂಭವಾದ ಸಂಸ್ಥೆ, ಇಂದು ಹೆಮ್ಮರವಾಗಿ ಬೆಳೆದಿದೆ. ನಾಲ್ಕು ಮಿಲಿಯನ್ ಶಿಬಿರಾರ್ಥಿಗಳನ್ನು ಹೊಂದಿದ್ದು, ದೇಶ ಸೇವೆಯಲ್ಲಿ ತೊಡಗಿ ದೇಶ ಭಕ್ತಿ ಬೆಳೆಸುತ್ತಿದೆ, ಶಿಬಿರಾರ್ಥಿಗಳು ರಾಷ್ಟ್ರೀಯ ಪರಂಪರೆಯ ಇತಿಹಾಸ ತಿಳಿದುಕೊಳ್ಳುವ ಮೂಲಕ ಸತ್ ಪ್ರಜೆಗಳಾಗಿ ಶಿಸ್ತು, ಸರಳತೆ, ಸಂಯಮ ಬೆಳೆಸಿಕೊಳ್ಳಬೇಕು ಎಂದರು.

ಸಮಾರಂಭದಲ್ಲಿ ಗ್ರಾ. ಪಂ ಅಧ್ಯಕ್ಷ ಪರಶುರಾಮ್, ಪ್ರಾಚಾರ್ಯ ಬಸವರಾಜ್, ಮಲ್ಲಿಕಾರ್ಜುನ ಕಲ್ಮಠ್, ಪಿಡಿಒ ಪ್ರಭುನಾಯ್ಕ್, ಶ್ರೀನಿವಾಸ, ಚನ್ನಮಲ್ಲಿಕಾರ್ಜುನ ಸ್ವಾಮಿ, ಲಿಂಬ್ಯಾನಾಯ್ಕ್, ಚಂದ್ರಪ್ಪ, ಲತಾ ಚಂದ್ರಪ್ಪ, ರೇಣುಕಪ್ಪ, ಸಿದ್ಧಲಿಂಗಮೂರ್ತಿ, ಜಿ. ಬಿ. ನಾಗನಗೌಡ, ತಿಪ್ಪೇಸ್ವಾಮಿ, ಆನಂದ, ರಾಜಶೇಖರ್, ನವಾಜ್, ಚಂದ್ರಪ್ಪ, ರೇಣುಕಾ ಪ್ರಸಾದ ಕಲ್ಮಠ್ ಹಾಗೂ ಶಿಬಿರಾರ್ಥಿಗಳು ಹಾಜರಿದ್ದರು.



## ನಾಗನಗೌಡ ಕಂದಕೂರು ಅಗಲಿಕೆಗೆ ರಂಭಾಪುರಿ ಶ್ರೀ ಸಂತಾಪ

ಶ್ರೀ ರಂಭಾಪುರಿ ಪೀಠ (ಬಾಳೆಹೊನ್ನೂರು), ಜ.28- ರೈತರ ಧ್ವನಿಯಾಗಿ ಕೆರೆ ತುಂಬಿಸುವ ಯೋಜನೆಗೆ ಸದಾ ಬೆನ್ನೆಲುಬಾಗಿ ನಿಂತಿದ್ದ ಗುರುಮಠಕಲ್ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ನಾಗನಗೌಡ ಕಂದಕೂರು (73) ಇವರ ಅಗಲಿಕೆಗೆ ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ತಮ್ಮ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

## ಎ.ಆರ್.ಜಿ. ಕಾಲೇಜಿನಲ್ಲಿ ಯುವಜನೋತ್ಸವ



ದಾವಣಗೆರೆ, ಜ.28- ವಿದ್ಯಾರ್ಥಿಗಳಲ್ಲಿನ ಪ್ರತಿಭೆಗಳನ್ನು ಗುರುತಿಸಲು ಪಠ್ಯೇತರ ಚಟುವಟಿಗಳು ಅವಶ್ಯಕ. ಕಲಿಕೆಯ ಜೊತೆಗೆ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಲಿಯುವುದು ಬಹುಮುಖ್ಯ ಎಂದು ದಾವಣಗೆರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕೂಟದ ಅಧ್ಯಕ್ಷ ಡಾ. ರಮೇಶ್ ಕುಮಾರ ಪಾಟೀಲ್ ಹೇಳಿದರು.

ದಾವಣಗೆರೆ ವಿಶ್ವವಿದ್ಯಾನಿಲಯವು ಎ.ಆರ್.ಜಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಅಂತರ್ ವಲಯ ಸಾಂಸ್ಕೃತಿಕ ಸ್ಪರ್ಧೆ ಶಿವಗಂಗೋತ್ರಿ ಯುವಜನೋತ್ಸವ 2023-24 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಡಾ. ಅಶೋಕ್ ಕುಮಾರ ವಿ. ಪಾಳೇದ್ ಅವರು ವಿದ್ಯಾರ್ಥಿಗಳಲ್ಲಿ ತುಂಬಾ ಪ್ರತಿಭೆಗಳಿದ್ದು, ಅವುಗಳನ್ನು ಗುರುತಿಸುವುದು ಅತ್ಯವಶ್ಯಕ. ಬೌದ್ಧಿಕಶಕ್ತಿಯನ್ನು ವೃದ್ಧಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳು ಬೇಕಾಗಿವೆ ಎಂದು ಹೇಳಿದರು.

ಸಮಾರಂಭದಲ್ಲಿ ಪ್ರಾಂಶುಪಾಲರಾದ ಡಾ. ಜಿ. ಬಿ.ಬೋರಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡಿದ್ದರು. ಬೊಮ್ಮಣ್ಣ, ಪ್ರೊ. ಅನಿತಾಕುಮಾರಿ, ಪ್ರೊ. ರಶ್ಮಿ, ಡಾ. ಹೆಚ್. ಆರ್. ತಿಪ್ಪೇಸ್ವಾಮಿ, ಡಾ. ಚಮನ್ ಸಾಬ್, ಕರಿಬಸಪ್ಪ, ಅಣ್ಣೇಶ್, ಮಂಜುನಾಥ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಪ್ರತಿಭಟನೆ

ನೆಚ್ಚಿನ ಪಕ್ಷದ ಹಿರಿಯರೇ, ಕಾರ್ಯಕರ್ತ ಬಂಧುಗಳೇ, ಮಂಡ್ಯ ಜಿಲ್ಲೆಯ ಕೆರಗೋಡಿನಲ್ಲಿ ಹನುಮ ಧ್ವಜವನ್ನು ತೆರವು ಮಾಡಿ ಗ್ರಾಮಸ್ಥರ ಮೇಲೆ ಲಾಠಿ ಚಾರ್ಜ್ ಮಾಡಿಸಿದ ಕಾಂಗ್ರೆಸ್ ಸರ್ಕಾರದ ಹಿಂದೂ ವಿರೋಧಿ ನೀತಿಯನ್ನು ಖಂಡಿಸಿ, ಜಿಲ್ಲಾ ಬಿಜೆಪಿ ಘಟಕದ ವತಿಯಿಂದ ಇಂದು ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ.

## ರಾಣೇಬೆನ್ನೂರು : ದೇಹದಾರ್ಢ್ಯ ಸ್ಪರ್ಧೆಗಳಿಗೆ ಅನುದಾನಕ್ಕೆ ಬೇಡಿಕೆ



ರಾಣೇಬೆನ್ನೂರು, ಜ. 28- ಅಂತರರಾಷ್ಟ್ರೀಯ ವಿಶ್ವವಿದ್ಯಾಲಯದ ದೇಹದಾರ್ಢ್ಯ ಸ್ಪರ್ಧೆಗಳಿಗೆ ಸರ್ಕಾರ ಅನುದಾನ ಕೊಡುವಂತೆ ಶಾಸಕ ಪ್ರಕಾಶ ಕೋಳಿವಾಡ ಅವರಿಗೆ ಇಲ್ಲಿನ ಎಸ್‌ಎಫ್‌ಐ ಪದಾಧಿಕಾರಿಗಳು ಮನವಿ ಸಲ್ಲಿಸಿದರು. ಕೇರಳದ ಕ್ಯಾಲಿಕಟ್‌ನಲ್ಲಿ ನಡೆಯುವ ಸ್ಪರ್ಧೆಗೆ ತಾಲ್ಲೂಕಿನ ತುಮ್ಮಿನಕಟ್ಟೆ ಗ್ರಾಮದ ಕಿರಣಕುಮಾರ ಆಯ್ಕೆಯಾಗಿದ್ದು, ತಿಂಗಳವರೆಗೆ ತಯಾರಿ ನಡೆಸಲು ಹಾಗೂ ಪ್ರಯಾಣದ ವೆಚ್ಚಕ್ಕೆ ಹಣದ ಅವಶ್ಯಕತೆ ಇದ್ದು, ಶಾಸಕರು ಅನುದಾನ ಕೊಡಿಸುವಂತೆ ಎಸ್‌ಎಫ್‌ಐ ಒತ್ತಾಯಿಸಿದೆ.

## ಫೆ.1ಕ್ಕೆ ಮಾಚಿದೇವರ ಜಯಂತಿ



ದಾವಣಗೆರೆ, ಜ.28- ವಚನ ಸಾಹಿತ್ಯ ರಕ್ಷಕ, ಗಣಾಚಾರ ಸಂಪನ್ನ, ವೀರ ಶರಣ ಶ್ರೀ ಮಡಿ ವಾಳ ಮಾಚಿದೇವರ ಜಯಂತಿ ಯನ್ನು ಫೆಬ್ರವರಿ 1 ರಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸರಳವಾಗಿ ಆಚರಿಸಲಾಗುವುದು ಎಂದು ದಾವಣಗೆರೆ ಜಿಲ್ಲಾ ಮಡಿವಾಳ ಮಾಚಿದೇವ ಸಂಘ ತಿಳಿಸಿದೆ.

ರಾಜ್ಯದಲ್ಲಿ ಬರಗಾಲ ಘೋಷಣೆ ಆಗಿರುವ ಹಿನ್ನೆಲೆಯಲ್ಲಿ ಮಾಚಿದೇವ ಜಯಂ ತಿಯನ್ನು ಸರಳವಾಗಿ ಆಚರಿಸಲು ಸರ್ಕಾರ ನಿರ್ಧರಿಸಿದ್ದ ಹಿನ್ನೆಲೆಯಲ್ಲಿ ಫೆ.1 ರಂದು ನಡೆಯುವ ಕಾರ್ಯಕ್ರಮವನ್ನು ಜಿಲ್ಲಾಧಿಕಾ ರಿಗಳ ಸಭಾಂಗಣದಲ್ಲಿ ಸರಳವಾಗಿ ಆಚರಿಸಿ, ಮಡಿವಾಳ ಮಾಚಿದೇವ ರಿಗೆ ಪುಷ್ಪಾರ್ಚನೆ, ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಗುವುದು.

ಈ ವೇಳೆ ಡಿಸಿ ಡಾ.ಎಂ.ವಿ.ವೆಂಕಟೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಪಾಲ್ಗೊಳ್ಳಲಿ ದ್ದಾರೆ ಎಂದು ಮಡಿವಾಳ ಮಾಚಿದೇವ ಸಂಘದ ಜಿಲ್ಲಾಧ್ಯಕ್ಷ ಎಂ. ನಾಗೇಂದ್ರಪ್ಪ ಸೇರಿದಂತೆ ಜಿಲ್ಲಾ ಸಂಘದ ಪದಾಧಿಕಾರಿಗಳು, ಸದಸ್ಯರು ತಿಳಿಸಿದ್ದಾರೆ.


ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.
ದಾವಣಗೆರೆ
ಆಡಳಿತ ಮಂಡಳಿ ಚುನಾವಣೆ-2024
ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ಮನವಿ.
ದಿನಾಂಕ 11.02.2024ರ ಭಾನುವಾರದಂದು ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಎಂ.ಜೆ. ಗಿರೀಶ್(ಮಾಗಾನಹಳ್ಳಿ) ಆದ ನಾನು ಗುರುಹಿರಿಯರ ಹಾಗೂ ತಮ್ಮೆಲ್ಲರ ಆಶೀರ್ವಾದದೊಂದಿಗೆ ನಿರ್ದೇಶಕರ ಚುನಾವಣೆಗೆ ಸ್ಪರ್ಧಿಸುತ್ತಿದ್ದು, ಬ್ಯಾಂಕಿನ ಮತ್ತು ಬ್ಯಾಂಕಿನ ಸದಸ್ಯರಾದ ತಮ್ಮಗಳ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.
ಈ ನನ್ನ ಸ್ಪರ್ಧೆಗೆ ಗುರು-ಹಿರಿಯರ ಆಶೀರ್ವಾದ, ಸ್ನೇಹಿತರು ಮತ್ತು ಸಜ್ಜನರ ಶುಭ ಹಾರೈಕೆ, ನಿಮ್ಮಗಳ ಆಶೀರ್ವಾದದೊಂದಿಗೆ ತಮ್ಮ ಅತಿ ಅಮೂಲ್ಯವಾದ ನಿಮ್ಮ ಮತವನ್ನು ನನಗೂ ಒಂದು ನೀಡಿ ನನ್ನನ್ನು ಪ್ರಚಂಡ ಬಹುಮತದಿಂದ ಆರಿಸಿ ನಿಮ್ಮೆಲ್ಲರ ಸೇವೆಯನ್ನು ಮಾಡಲು ಅವಕಾಶ ಮಾಡಿಕೊಡಬೇಕಾಗಿ ಪ್ರೀತಿಯಿಂದ ವಿನಮ್ರವಾಗಿ ಕೇಳಿಕೊಳ್ಳುತ್ತೇನೆ.
ತಮ್ಮ ಸೇವಾಕಾಂಕ್ಷಿ
ಎಂ.ಜೆ. ಗಿರೀಶ್(ಮಾಗಾನಹಳ್ಳಿ)
ದಿನಾಂಕ : 11-02-2024ನೇ ಭಾನುವಾರ
ಬೆಳಗ್ಗೆ 9.00 ರಿಂದ ಸಂಜೆ 4.00 ರವರೆಗೆ
ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ, ದಾವಣಗೆರೆ




# ಮುಖ್ಯಶಿಕ್ಷಕಿ ವಿರುದ್ಧ ವಿದ್ಯಾರ್ಥಿಗಳು ರಸ್ತೆ ತಡೆದು ಪ್ರತಿಭಟನೆ

**ಜಗಳೂರು**

ಜಗಳೂರು, ಜ.28- ತಾಲ್ಲೂಕಿನ ದೇವಿಕೆರೆ ಸರ್ಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕಿ ಸರ್ಕಾರದ ಸೌಲಭ್ಯಗಳನ್ನು ಸರಿಯಾಗಿ ವಿತರಿಸುತ್ತಿಲ್ಲ ಎಂದು ಆರೋಪಿಸಿ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಪೋಷಕರು ಹಾಗೂ ಗ್ರಾಮಸ್ಥರೊಂದಿಗೆ ರಸ್ತೆ ತಡೆದು ಮುಖ್ಯಶಿಕ್ಷಕಿ ಪ್ರತಿಭಟನೆ ವಿರುದ್ಧ ನಡೆಸಿದರು.

ಮುಖ್ಯಶಿಕ್ಷಕಿ ವಿದ್ಯಾರ್ಥಿಗಳಿಗೆ ಸರ್ಕಾರಿ ಸೌಲಭ್ಯಗಳಾದ ಶೂ, ಸಮವಸ್ತ್ರಗಳನ್ನು ಸಮರ್ಪಕವಾಗಿ ವಿತರಿಸುವುದಿಲ್ಲ. ಕಳೆದ ವರ್ಷದಲ್ಲಿನ ಶೂಗಳನ್ನೇ ವಿತರಿಸಿದ್ದಾರೆ, ಅಲ್ಲದೆ ಮೂಲಸೌಕರ್ಯಗಳಾದ ಕುಡಿಯುವ ನೀರು ಹಾಗೂ ಶೌಚಾಲಯಗಳ ಸೌಲಭ್ಯ ಇಲ್ಲ. ವಿದ್ಯಾರ್ಥಿಗಳಿಂದ ಅನಧಿಕೃತವಾಗಿ 500ರೂ ವರೆಗೆ ವಸೂಲಿ ಮಾಡುತ್ತಿದ್ದಾರೆ. ಪ್ರಶ್ನಿಸಿದರೆ ಭಯಪಡಿಸುತ್ತಾರೆ ಎಂದು ವಿದ್ಯಾರ್ಥಿಗಳು ಆರೋಪಿಸಿದರು.

ಎಸ್. ಡಿ. ಎಂ. ಸಿ. ಅಧ್ಯಕ್ಷ ಎಂ. ಎಲ್. ನಾಗರಾಜ್ ಮಾತನಾಡಿ, ನಾನು ಎಸ್ ಡಿ ಎಂ ಸಿ ಅಧ್ಯಕ್ಷರಾಗಿ ಎರಡು ವರ್ಷ ಕಳೆದರೂ ಅಭಿವೃದ್ದಿ ಬಗ್ಗೆ ಮಾಹಿತಿಯಿಲ್ಲ. ಸಭೆಗಳಲ್ಲಿ ಸಹಿಯನ್ನೂ ಮಾಡಿಸಿಲ್ಲ. ಏಕಪಕ್ಷೀಯ ನಿರ್ಧಾರ ಕೈಗೊಳ್ಳುತ್ತಾರೆ. ಅಲ್ಲದೆ ಅನಧಿಕೃತವಾಗಿ ನಿರಂತರ ಗೈರಾಗುತ್ತಾರೆ ಎಂದು ಆರೋಪಿಸಿದರು.

ಈ ಬಗ್ಗೆ ಹಲವು ಬಾರಿ ಇಲಾಖೆ ಅಧಿಕಾರಿಗಳಿಗೆ ದೂರು ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಇಂದು ಸ್ವಯಂ ಪ್ರೇರಿತವಾಗಿ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಹೋರಾಟಕ್ಕೆ ರಸ್ತೆಗಿಳಿದಿದ್ದಾರೆ. ಯಾವುದೇ ಕ್ರಮಕೈಗೊಳ್ಳದೆ, ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದರು.

**ಸ್ಥಳಕ್ಕೆ ಬಿಆರ್‌ಸಿ ಭೇಟಿ :** ಪ್ರತಿಭಟನಾ ಸ್ಥಳಕ್ಕೆ ಬಿಆರ್ ಸಿ ಡಿ ಡಿ ಹಾಲಪ್ಪ ಭೇಟಿ ನೀಡಿ ಪ್ರತಿಭಟನೆ ತಿಳಿಗೊಳಿಸಿ ಶಾಲಾ ಆವರಣದಲ್ಲಿ ಸಭೆ ನಡೆಸಿ, ಕಳೆದ 6 ತಿಂಗಳ ಹಿಂದೆ ಮುಖ್ಯಶಿಕ್ಷಕಿ ವರ್ಗಾವಣೆಗೆ ಶಿಫಾರಸ್ಸು ಮಾಡಿ ವರದಿ ಸಲ್ಲಿಸಲಾಗಿದೆ, ಆಯುಕ್ತರ ಹಂತದಲ್ಲಿದೆ. ಶಿಕ್ಷಣ ಇಲಾಖೆ ಅನ್ವಯ ತನಿಖೆ ನಡೆಯುತ್ತಿದೆ.ಇದೀಗ ಡಿಡಿಪಿಐ ಅವರ ನಿರ್ದೇಶನದಂತೆ ಶಾಲೆಯ ಹಿರಿಯ ಶಿಕ್ಷಕರಿಗೆ ಮುಖ್ಯಶಿಕ್ಷಕರ ಜವಾಬ್ದಾರಿ ಕಾರ್ಯಭಾರ ವಹಿಸಲಾಗಿದೆ.

ಮುಖ್ಯಶಿಕ್ಷಕಿ ಅರ್ಜುಮನ್ ಬಾನು ಅವರಿಗೆ ಕಡ್ಡಾಯ ರಜೆ ನೀಡಲಾಗಿದೆ. ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮುಖಂಡ ಬಸವಾಪುರ ರವಿಚಂದ್ರ, ಗ್ರಾ.ಪಂ ಅಧ್ಯಕ್ಷೆ ರಣದಮ್ಮ, ಚಂದ್ರಪ್ಪ, ಗ್ರಾ. ಪಂ. ಸದಸ್ಯ ಗುರುಸ್ವಾಮಿ, ನಾಗರಾಜ್ ,ಮುಖಂಡರಾದ ಶೃಂಗೇಶ್, ಸ್ವಾಮಿ, ಭಾಗವಹಿಸಿದ್ದರು.




ಅಭಿನಂದನೆಗಳು
ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ ಆಡಳಿತ ಮಂಡಳಿ ನಿರ್ದೇಶಕರಾಗಿ ಚುನಾಯಿತಗೊಂಡಿರುವ ರೈಸ್‌ಮಿಲ್ ಮಾಲೀಕರೂ, ನಮ್ಮ ಆತ್ಮೀಯರೂ ಆದ
ಶ್ರೀ ಕೋಗುಂಡಿ ಬಕ್ಕೇಶಪ್ಪ
ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.
BMS ಬಿ. ಮುರಿಗೆಪ್ಪ ಸಿದ್ಧರಾಮಪ್ಪ
ಮಂಡಿಪೇಟೆ, ದಾವಣಗೆರೆ.
asianpaints

# ಬಿಎಸ್‌ಸಿ ನವೀಕೃತ ಶೋರೂಂ ಉದ್ಘಾಟಿಸಿದ ನಟ ವಿನಯ್ ರಾಜ್‌ಕುಮಾರ್

ದಾವಣಗೆರೆ, ಜ. 28- ನಗರದ ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್ ಅಂಗಡಿಯ ಪುರುಷರ ಉಡುಪುಗಳ ನವೀಕೃತ ಶಾಖೆಯ ಉದ್ಘಾಟನೆ ಹಾಗೂ 11ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಚಿತ್ರನಟ ರಾಘವೇಂದ್ರ ರಾಜ್ ಕುಮಾರ್ ಪುತ್ರ ವಿನಯ್ ರಾಜ್ ಕುಮಾರ್ ಉದ್ಘಾಟಿಸಿದರು. ಇದಕ್ಕೂ ಮುನ್ನ ಅವರು ಚಿತ್ರದ ನಿರ್ಮಾಪಕ ಹಾಗೂ ನಿರ್ದೇಶಕರೊಂದಿಗೆ ಶಾಮನೂರು ಆಂಜನೇಯ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು, ನಂತರ ಪುನೀತ್ ರಾಜ್ ಕುಮಾರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಕಾಯಿಪೇಟೆಯಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು.



ಬಿ.ಎಸ್. ಚನ್ನಬಸಪ್ಪ ಅಂಗಡಿಯಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ತಾವು ನಟಿಸಿರುವ 'ಒಂದು ಸರಳ ಪ್ರೇಮಕಥೆ' ಚಿತ್ರವು ಇದೇ ಫೆ.8ರಂದು ರಾಜ್ಯದಾದ್ಯಂತ ಬಿಡುಗಡೆಯಾಗುತ್ತಿರುವುದಾಗಿ ಹೇಳಿದರು. ಮೂರು ವರ್ಷಗಳ ನಂತರ ನನ್ನ ನಾಲ್ಕನೇ ಚಿತ್ರ ಬಿಡುಡೆಯಾಗುತ್ತಿದೆ. ಹುಬ್ಬಳ್ಳಿ, ಬೆಳಗಾವಿಗಳಲ್ಲಿ ಚಿತ್ರದ ಬಗ್ಗೆ ಪ್ರಚಾರ ನಡೆಸಿದ್ದು, ಇದೀಗ ದಾವಣಗೆರೆ ಆಗಮಿಸಿರುವುದಾಗಿ ಅವರು ಹೇಳಿದರು.

ನಿರ್ದೇಶಕ ಸಿಂಪಲ್ ಸುನಿ ಮಾತನಾಡಿ, ಪ್ರೇಮಕಥೆ, ಹಾಸ್ಯ ಇರುವ ಇದು ಕೌಟುಂಬಿಕ ಚಿತ್ರವಾಗಿದೆ. ವಿನಯ್ ರಾಜ್ ಕುಮಾರ್ ಜೊತೆ 'ರಾಧಾ ಕೃಷ್ಣ' ಧಾರಾವಾಹಿ ಖ್ಯಾತಿಯ ಮಲ್ಲಿಕಾ ಸಿಂಗ್ ಮತ್ತು ಸ್ವಾತಿಷ್ಟ ಕೃಷ್ಣನ್ ಮುಖ್ಯ ಭೂಮಿಕೆಯಲ್ಲಿದ್ದಾರೆ ಮತ್ತು ಸಾಧು ಕೋಕಿಲ, ರಾಜೇಶ್ ನಟರಂಗ, ಅರುಣ್ ಬಾಲರಾಜ್ ಮತ್ತು ಅನೇಕರು ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ ಎಂದು ಹೇಳಿದರು. ಸಂಗೀತದ ಆಸಕ್ತಿಯುಳ್ಳ ನಿರುದ್ಯೋಗ ಯುವಕನೊಬ್ಬನ ಪ್ರೇಮಕಥೆ ಅನೇಕ ತಿರುವುಗಳನ್ನು ಪಡೆಯುತ್ತದೆ. ಚಿತ್ರದಲ್ಲಿ ಹತ್ತು ಹಾಡುಗಳಿವೆ.

ಅರ್ಮಾನ್ ಮಲ್ಲಿಕ್, ಕೇಶವಾನಂದ, ಬೀದರ್‌ನ ಶಿವಾನಿ ಸೇರಿದಂತೆ ಹಲವಾರು ಯುವ ಗಾಯಕರು ಚಿತ್ರದಲ್ಲಿ ಹಾಡಿದ್ದಾರೆ ಇದೊಂದು ಸಂಗೀತಮಯ ಪ್ರೇಮ ಚಿತ್ರವೂ ಹೌದು ಎಂದರು.

ಬಿಎಸ್‌ಸಿಯ ಬಿ.ಸಿ. ಚಂದ್ರಶೇಖರ್ ಮಾತನಾಡಿ, ನಟ ವಿನಯ್ ರಾಜ್ ಕುಮಾರ್ ಆಗಮಿಸಿದ್ದಕ್ಕೆ ಸಂತಸ ವ್ಯಕ್ತಪಡಿಸುತ್ತಾ, ಅವರ ಅಭಿನಯದ ಚಿತ್ರ ಯಶಸ್ವಿಯಾಗಲಿ ಎಂದು ಹಾರೈಸಿದರು. ಚಿತ್ರದ ನಿರ್ಮಾಪಕ ರಮೇಶ್, ಜಾನ್ ಮಂಜು, ಬಿಎಸ್‌ಸಿಯ ಬಿ.ಎಸ್. ಮೃಣಾಲ್ ಇತರರು ಉಪಸ್ಥಿತರಿದ್ದರು.








ದಾವಣಗೆರೆ : ಬ್ರಾಹ್ಮಣ ಸಮಾಜ ಸೇವಾ ಸಂಘದಿಂದ ಸ್ಫೂರ್ತಿ 2024 ವಸ್ತು ಪ್ರದರ್ಶನ, ಮಾರಾಟ ಹಾಗೂ ಆಹಾರ ಮೇಳವು ಇಲ್ಲಿನ ಶ್ರೀ ಶಂಕರ ಸಮುದಾಯ ಭವನದಲ್ಲಿ ಭಾನುವಾರ ನಡೆಯಿತು.

## ನಗರದಲ್ಲಿ ನಾಳೆ ಸಂತೋಷದ ಕಾರ್ಯಾಗಾರ



ದಾವಣಗೆರೆ, ಜ.28- ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ಡಾ. ಬಾಣಾಪುರಮಠ ಮಕ್ಕಳ ಆಸ್ಪತ್ರೆಯ 2ನೇ ಮಹಡಿಯಲ್ಲಿ ನಾಡಿದ್ದು ದಿನಾಂಕ 30ರಿಂದ ಫೆಬ್ರವರಿ 4ರವರೆಗೆ ಬೆಳಿಗ್ಗೆ ಮತ್ತು ಸಂಜೆ 2 ಬ್ಯಾಚುಗಳಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 99005 01877, 77601 55659.

## ನಂದಿಗುಡಿ ಹಾಸ್ಟೆಲ್ ಕಟ್ಟಡಕ್ಕೆ ಅನುದಾನ ನೀಡುವಂತೆ ಮನವಿ

ಮಲೇಬೆನ್ನೂರು, ಜ.28- ದಾವಣಗೆರೆ ನಗರದಲ್ಲಿರುವ ನಂದಿಗುಡಿ ಕೃಪಾಪೋಷಿತ ವೀರಶೈವ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ಹಾಸ್ಟೆಲ್ ಕಟ್ಟಡ ನಿರ್ಮಾಣಕ್ಕಾಗಿ ಸರ್ಕಾರದಿಂದ ಅನುದಾನ ನೀಡುವಂತೆ ನೊಳಂಬ ಸಮಾಜದ ಮುಖಂಡ ಜಿಗಳಿ ಇಂದೂಧರ್ ಅವರು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನ ಚಿಕ್ಕಬಾಸೂರು ಗ್ರಾಮದಲ್ಲಿ ಈಚೆಗೆ ನಡೆದ ಶ್ರೀಗುರು ಸಿದ್ದರಾಮೇಶ್ವರರ 851 ನೇ ಜಯಂತಿ ಮಹೋತ್ಸವದ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಇದಕ್ಕೆ ಸಿಎಂ ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಅನುದಾನ ನೀಡುವ ಭರವಸೆ ನೀಡಿದ್ದಾರೆಂದು ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ತಿಳಿಸಿದ್ದಾರೆ.



## ಯಾವುದೇ ಹುದ್ದೆಯನ್ನು ಮೀಸಲಾತಿಯಿಂದ ಹೊರ ಹಾಕುವುದಿಲ್ಲ : ಕೇಂದ್ರ

ನವದೆಹಲಿ, ಜ. 28 – ಯಾವುದೇ ಹುದ್ದೆಯನ್ನು ಮೀಸಲಾತಿ ವ್ಯಾಪ್ತಿಯಿಂದ ಹೊರ ಹಾಕಲಾಗದು ಎಂದು ಕೇಂದ್ರ ಶಿಕ್ಷಣ ಸಚಿವಾಲಯ ತಿಳಿಸಿದೆ. ಮೀಸಲಾಗಿರುವ ಹುದ್ದೆಗಳಿಗೆ ಅಭ್ಯರ್ಥಿಗಳು ಲಭ್ಯವಾಗದೇ ಇದ್ದರೆ, ಸಾಮಾನ್ಯ ವರ್ಗದಿಂದ ಭರ್ತಿ ಮಾಡಿಕೊಳ್ಳಲು ವಿಶ್ವವಿದ್ಯಾಲಯ ಧನಸಹಾಯ ಆಯೋಗ ಪ್ರಸ್ತಾಪಿಸಿತ್ತು.

ಈ ಬಗ್ಗೆ ಯು.ಜಿ.ಸಿ. ಕರಡು ಮಾರ್ಗಸೂಚಿಗಳನ್ನು ಪ್ರಸ್ತಾಪಿಸಿತ್ತು. ಕಾಂಗ್ರೆಸ್ ಸೇರಿದಂತೆ ಹಲವು ಪಕ್ಷಗಳು ಈ ಕ್ರಮವನ್ನು ಟೀಕಿಸಿದ್ದವು. ಮೋದಿ ಸರ್ಕಾರ ಮೀಸಲಾತಿ ಅಂತ್ಯಗೊಳಿಸಲು ಸಂಚು ನಡೆಸಿದೆ ಎಂದು ಕಾಂಗ್ರೆಸ್ ಆರೋಪಿಸಿತ್ತು.

ಈ ಬಗ್ಗೆ ಸ್ಪಷ್ಟನೆ ನೀಡಿರುವ ಯು.ಜಿ.ಸಿ. ಅಧ್ಯಕ್ಷ ಎಂ. ಜಗದೀಶ್ ಕುಮಾರ್, ಯಾವುದೇ ಹುದ್ದೆಯನ್ನು ಮೀಸಲು ವ್ಯಾಪ್ತಿಯಿಂದ ಹೊರ ಹಾಕಿಲ್ಲ, ಇನ್ನು ಮುಂದೆಯೂ ಅಂತಹ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದಿದ್ದಾರೆ.

## ಕಾಂಗ್ರೆಸ್ 15-20 ಕ್ಷೇತ್ರಗಳಲ್ಲಿ ಗೆಲ್ಲಲಿದೆ : ಸಿಎಂ

ಚಿತ್ರದುರ್ಗ, ಜ. 28 – ಮುಂಬುರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ 15-20 ಸ್ಥಾನಗಳಲ್ಲಿ ಗೆಲ್ಲಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬಿಜೆಪಿ ಎಲ್ಲಾ 28 ಸ್ಥಾನಗಳಲ್ಲಿ ಗೆಲ್ಲುವುದಾಗಿ ಸುಳ್ಳು ಹೇಳುತ್ತಿದೆ. ನಾವು ಅವರಂತೆ ಸುಳ್ಳು ಹೇಳುವುದಿಲ್ಲ. 15ರಿಂದ 20 ಸ್ಥಾನಗಳಲ್ಲಿ ನಾವು ಗೆಲ್ಲುತ್ತೇವೆ. ಈ ಬಗ್ಗೆ ನಾವು ಸಮೀಕ್ಷೆ ನಡೆಸಿದ್ದೇವೆ ಎಂದು ಸಿದ್ದರಾಮಯ್ಯ ಪತ್ರಕರ್ತರೊಂದಿಗೆ ಮಾತನಾಡುತ್ತಾ ತಿಳಿಸಿದ್ದಾರೆ.

## ನಿತೀಶ್ ಹಿಂದಿಯನ್ನೂ ಸಹಿಸಿಕೊಂಡಿದ್ದೆವು

(1ನೇ ಪುಟದಿಂದ) ಮಾತನಾಡಬೇಕು ಎಂಬುದಷ್ಟೇ ಅವರ ಸಂದೇಶವಾಗಿತ್ತು ಎಂದರು. ಪ್ರತಿಯೊಬ್ಬರೂ ಹಿಂದಿಯಲ್ಲೇ ಮಾತನಾಡಬೇಕು ಎಂದು ನಿತೀಶ್ ಕುಮಾರ್ ಹೇಳುತ್ತಿದ್ದರು. ನಾವು ಸಹಿಸಿಕೊಂಡೆವು. ಮೈತ್ರಿಕೂಟದ ಸೌಹಾರ್ದತೆಗಾಗಿ ನಾವು ಸುಮ್ಮನಿದ್ದೆವು, ಹೊಂದಾಣಿಕೆ ಮಾಡಿಕೊಂಡೆವು ಎಂದು ಬಾಲು ಹೇಳಿದರು.


ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕ್ ಲಿ.,
# 1058/3-4, ಜಯದೇವ ಸರ್ಕಲ್ ಹತ್ತಿರ, ಚಾಯರ್ ರೋಡ್, ಕೆ.ಬಿ. ಬಡಾವಣೆ, ದಾವಣಗೆರೆ-2.
ಫೋನ್ : 08192-257901, 255875, 230304. e-mail : muruga.bank@yahoo.com


ಶೀಘ್ರದಲ್ಲೇ ನೂತನ ಶಾಖೆ ಆರಂಭ

ಶ್ರೀ ಮುರುಘರಾಜೇಂದ್ರ ಕೋ-ಆಪರೇಟಿವ್ ಬ್ಯಾಂಕಿನ ಶಾಖೆಯನ್ನು # 2767, 1ನೇ ಮಹಡಿ, 3ನೇ ಕ್ರಾಸ್, ಎಂ.ಸಿ.ಸಿ. 'ಬಿ' ಬ್ಲಾಕ್, ಬಿಗ್ ಮಿಶ್ರ ಪೇಡಾ ಹತ್ತಿರ, ಮಾಮಾಸ್ ಜಾಯಿಂಟ್ ರೋಡ್, ದಾವಣಗೆರೆ - 577004. ಇಲ್ಲಿ ಶೀಘ್ರದಲ್ಲೇ ಪ್ರಾರಂಭಿಸಲಿದ್ದೇವೆ.

ಎಂ. ಜಯಕುಮಾರ್, ಅಧ್ಯಕ್ಷರು
ಎಸ್.ಓಂಕಾರಪ್ಪ, ಉಪಾಧ್ಯಕ್ಷರು

LEAD GENERATION EXECUTIVE
WALKIN INTERVIEW
> 0-2 yrs Lead Gen Experience
> Any Graduation
> Understanding of Marketing
> Good Communication with Social Media Skills
30th Jan 10AM
DTC Infotech Pvt. Ltd.
Call: +91 83283 02220
Vishistaa Educational Institutions
54/2, 3rd Floor,2nd Main, Opp. AVK Women's College
P.J. Extension, Davangere - 577002


## ದ್ವಿತೀಯ ವರ್ಷದ ಪುಣ್ಯ ಸ್ಮರಣೆ




ಲಿಂ|| ಶ್ರೀಮತಿ ಸುವರ್ಣಮ್ಮ ಲಿಂ|| ಶ್ರೀ ಮಾಕನೂರು ನಾಗನಗೌಡರ ಪುತ್ರನಾದ ಲಿಂ|| ಶ್ರೀ ಬಿ. ಶಿವನಗೌಡ್ರು

ಮುದ್ದಿನ ಮಗನಾಗಿ, ಸ್ನೇಹದಿಂದ ಇದ್ದ ಸಹೋದರನಾಗಿ, ಪ್ರೀತಿಯ ಗಂಡನಾಗಿ, ತ್ಯಾಗ ಜೀವಿ ತಂದೆಯಾಗಿ, ಸ್ನೇಹಿತರಿಗೆ ಸಹೋದರನಾಗಿ, ಒಳ್ಳೆಯ ನಡತೆಯನ್ನು ಹೇಳಿಕೊಟ್ಟ ತಾತನಾಗಿ, ದೇಹದಾನ ಮಾಡಿ ಎಲ್ಲರಿಗೂ ಪ್ರೇರಣೆಯಾಗಿ, ಕೆಡಕು ಬಯಸದ ಜೀವ ನೀವು
ನೀವು ನಮ್ಮನ್ನಗಲಿ 10,51,200 ನಿಮಿಷಗಳು ಕಳೆದರೂ, ನಮ್ಮ ಹೃದಯದಲ್ಲಿ ಸದಾ ನೀವಿರುವಿರಿ. ನೀವು ನಡೆಸಿದ ಸರಳ ಜೀವನ, ನೀವು ಹೇಳಿಕೊಟ್ಟ ಒಳ್ಳೆಯತನ, ನಿಮ್ಮ ಆದರ್ಶ ಬದುಕು, ನೀವು ತೋರಿಸಿದ ಒಳ್ಳೆಯ ಮಾರ್ಗವೇ ನಮ್ಮೆಗೆಲ್ಲಾ ದಾರಿ ದೀಪ.

ಸದಾ ನಿಮ್ಮ ಸ್ಮರಣೆಯಲ್ಲಿರುವ .......
ಶ್ರೀಮತಿ ಸುಜಾತ ಶಿವನಗೌಡ್ರು, ಮಕ್ಕಳು ಮತ್ತು ಮೊಮ್ಮಕ್ಕಳು, ಸಹೋದರರು, ಸಹೋದರಿಯರು ಹಾಗೂ ಮಾಕನೂರು ವಂಶಸ್ಥರು, ಬಂಧು-ಮಿತ್ರರು.


ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

ಬ್ಯಾಂಕಿನ ಷೇರುದಾರರಲ್ಲಿ ಮನವಿ



ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಇದರ ಆಡಳಿತ ಮಂಡಳಿ ಚುನಾವಣೆಯು ದಿನಾಂಕ 11.02.2024ರ ಭಾನುವಾರ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಡಾ. ಎಂ.ಸಿ. ಮೋದಿ ವೃತ್ತದ ಬಳಿ, ದಾವಣಗೆರೆ ಇಲ್ಲಿ ನಡೆಯಲಿದ್ದು, ಶ್ರೀ ಬಿ.ಸಿ. ಉಮಾಪತಿ ಮತ್ತು ಶ್ರೀ ಕೋಗುಂಡಿ ಬಕ್ಕೇಶಪ್ಪ ಅವರುಗಳ ನೇತೃತ್ವದಲ್ಲಿ ನಾವುಗಳು ಒಮ್ಮತದಿಂದ ಸ್ಪರ್ಧಿಸಲಿದ್ದೇವೆ. ಈ ಹಿನ್ನೆಲೆಯಲ್ಲಿ ದಿನಾಂಕ 29.01.2024ರ ಸೋಮವಾರ ಬೆಳಿಗ್ಗೆ 9.30ಕ್ಕೆ ಶ್ರೀ ಗಣಪತಿ ದೇವಸ್ಥಾನ (ಅಪೂರ್ವ ಹೋಟೆಲ್ ಹಿಂಭಾಗ, ಪಿ.ಬಿ. ರಸ್ತೆ, ದಾವಣಗೆರೆ)ದಲ್ಲಿ ಪೂಜೆ ಸಲ್ಲಿಸಿ, ನಂತರ ಅಲ್ಲಿಂದ ಬ್ಯಾಂಕಿಗೆ ತೆರಳಿ, ಚುನಾವಣಾಧಿಕಾರಿಗಳಿಗೆ ನಾವೆಲ್ಲರೂ ನಮ್ಮ ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸಲಿದ್ದೇವೆ. ನಮಗೆ ತಮ್ಮ ಅಮೂಲ್ಯವಾದ ಮತವನ್ನು ನೀಡುವುದರ ಮೂಲಕ ಬ್ಯಾಂಕಿನ ಅಭಿವೃದ್ಧಿಗೆ ಮತ್ತು ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.






ಶ್ರೀ ಕೋಗುಂಡಿ ಬಕ್ಕೇಶಪ್ಪ | ಶ್ರೀ ಅಂದನೂರು ಮುಪ್ಪಣ್ಣ | ಶ್ರೀ ಬಿ.ಸಿ. ಉಮಾಪತಿ | ಶ್ರೀ ಪಲ್ಲಾಗಟ್ಟೆ ಶಿವಾನಂದಪ್ಪ | ಶ್ರೀ ಎಂ. ಚಂದ್ರಶೇಖರ್ | ಶ್ರೀ ಟಿ.ಎಸ್. ಜಯರುದ್ರೇಶ್ | ಶ್ರೀ ದೇವರಮನಿ ಶಿವಕುಮಾರ್ | ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್ | ಶ್ರೀ ಕಂಚಿಕೇರಿ ಮಹೇಶ್ | ಶ್ರೀಮತಿ ಸುರೇಖ ಎಂ. ಚಿಗಟೇರಿ | ಶ್ರೀಮತಿ ಎ.ಆರ್. ಅರ್ಚನ | ಶ್ರೀ ಇ.ಎಂ. ಮಂಜುನಾಥ | ಶ್ರೀ ವಿ. ವಿಕ್ರಮ್ | ಶ್ರೀ ಹೆಚ್.ಎಂ. ರುದ್ರಮುನಿಸ್ವಾಮಿ | ಶ್ರೀ ಸೋಗಿ ಮುರುಗೇಶ್

Bapuji Educational Association (Regd.)
BAPUJI ACADEMY OF MANAGEMENT AND RESEARCH
LAKE VIEW CAMPUS, S. S. LAYOUT, DAVANGERE - 577004.



ದಾವಣಗೆರೆ ವಿವಿ ಎಂ.ಬಿ.ಎ. ಸ್ನಾತಕೋತ್ತರ ಪರೀಕ್ಷೆಯಲ್ಲಿ 9 ರ್‍ಯಾಂಕ್‌ಗಳನ್ನು ಪಡೆದು ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರೀಸರ್ಚ್ (BAMR) ಕಾಲೇಜಿಗೆ ಕೀರ್ತಿ ತಂದ ಎಂ.ಬಿ.ಎ. ಸ್ನಾತಕೋತ್ತರ ವಿದ್ಯಾರ್ಥಿಗಳು



SHAZIYA Y. 1st RANK | SHIVANANDA BARADI 2nd RANK | B PRIYA 3rd RANK | BHARAGAVI S INAMDAR 3rd RANK | MUSKAN H M 4th RANK | TEJASWINI H AIRANI 5th RANK | PALLAVI H 6th RANK | SHIREESHA V 7th RANK | TASMIYA BANU 10th RANK

ದಾವಣಗೆರೆ ವಿಶ್ವವಿದ್ಯಾನಿಲಯದಿಂದ 2022-23ನೇ ಸಾಲಿನ ಎಂ.ಬಿ.ಎ. (ಮಾಸ್ಟರ್ ಆಫ್ ಬ್ಯುಜಿನೆಸ್ ಅಡ್ಮಿನಿಸ್ಟ್ರೇಷನ್) ಸ್ನಾತಕೋತ್ತರ ಪದವಿ ಪರೀಕ್ಷೆಯ ರ್‍ಯಾಂಕ್ ಪಟ್ಟಿಯನ್ನು ಪ್ರಕಟಿಸಿದ್ದು, ಒಟ್ಟು 10 ರ್‍ಯಾಂಕ್‌ಗಳ ಪಟ್ಟಿಯಲ್ಲಿ ದಾವಣಗೆರೆಯ ಪ್ರತಿಷ್ಠಿತ ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರೀಸರ್ಚ್ (BAMR) ಕಾಲೇಜಿನ 09 ವಿದ್ಯಾರ್ಥಿಗಳು ರ್‍ಯಾಂಕ್‌ಗಳನ್ನು ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಈ ಸಾಧನೆಗೈದ ವಿದ್ಯಾರ್ಥಿಗಳಿಗೆ ಅಭಿನಂದನೆಗಳು.

ಡಾ. ಶಾಮನೂರು ಶಿವಶಂಕರಪ್ಪನವರು, ಶಾಸಕರು, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ, ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.
ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು, ಗಣಿ, ಭೂ ವಿಜ್ಞಾನ, ತೋಟಗಾರಿಕೆ ಸಚಿವರು, ಕರ್ನಾಟಕ ಸರ್ಕಾರ. ಜಂಟಿ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ.
ಡಾ. ಅಥಣಿ ಎಸ್. ವೀರಣ್ಣನವರು FCA, ಅಧ್ಯಕ್ಷರು, ಬಾಪೂಜಿ ಬಿ ಸ್ಕೂಲ್ಸ್
ಡಾ. ಸ್ವಾಮಿ ತ್ರಿಭುವಾನಂದ ಎಚ್. ವಿ., ನಿರ್ದೇಶಕರು, ಬಾಪೂಜಿ ಬಿ ಸ್ಕೂಲ್ಸ್

ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ, ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರೀಸರ್ಚ್ ಕಾಲೇಜ್, (BAMR)